ಅಕ್ಟೋಬರ್-ಡಿಸೆಂಬರ್ 2025

ಸಂಪುಟ : 7 ಸಂಚಿಕೆ : 4

# ಕೃಷಿವನ

ತ್ರೈಮಾಸಿಕ ವಾರ್ತಾಪತ್ರ

ಖಾಸಗಿ ಪ್ರಸಾರಕ್ಕಾಗಿ

IAFT Bengaluru



ಕೃಷಿಅರಣ್ಯದ ಮೂಲಕ ಜಲಭಾಗ್ಯ

**ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ ಬೆಂಗಳೂರು ರವರ ವತಿಯಿಂದ 2025ನೇ ಸಾಲಿನ ಎ.ಎಸ್. ಸದಾಶಿವಯ್ಯ ಹಾಗೂ ಟಿ.ಹೆಚ್. ಮಲ್ಲಿಕಾರ್ಜುನ ರಾಜ್ಯ ಮಟ್ಟದ ಕೃಷಿಅರಣ್ಯ ಸಾಧಕ ಪ್ರಶಸ್ತಿಯನ್ನು ಪ್ರಧಾನ ಮಾಡಲಾಯಿತು.**









## ಸುಭಾಷಿತ

**ಯಶಸ್ಸಿನ ಗುಟ್ಟೇನು?**
**ಸೂಕ್ತ ನಿರ್ಧಾರಗಳು.**
**ಸೂಕ್ತ ನಿರ್ಧಾರಗಳನ್ನು ಕೈಗೊಳ್ಳುವುದು ಹೇಗೆ?**
**ಅನುಭವದಿಂದ.**
**ಅನುಭವ ಗಳಿಸುವುದು ಹೇಗೆ?**
**ತಪ್ಪು ನಿರ್ಧಾರಗಳಿಂದ.**
**– ಎ.ಪಿ.ಜೆ. ಅಬ್ದುಲ್ ಕಲಾಂ**


# ಕೃಷಿವನ

ತ್ರೈಮಾಸಿಕ ವಾರ್ತಾಪತ್ರ

**Volume: 7 Issue: 4**
ಸಂಪುಟ: 7 ಸಂಚಿಕೆ: 4



## ಸಂಪಾದಕೀಯ ಮಂಡಳಿ

**ಗೌರವ ಸಂಪಾದಕರು**
ಡಾ. ಎಸ್.ಸಿ.ವಿ. ರೆಡ್ಡಿ, ನಿರ್ದೇಶಕರು, ಕೆ.ಎಸ್.ಎಸ್.ಪಿ.ಎ(ನಿ)

**ಪ್ರಧಾನ ಸಂಪಾದಕರು**
ಶ್ರೀ ಎನ್.ಡಿ. ತಿವಾರಿ, ಭಾ.ಅ.ಸೇ(ನಿ)

**ಸಂಪಾದಕರು**
ಶ್ರೀ ಹೆಚ್.ಜಿ. ಶಿವಾನಂದಮೂರ್ತಿ, ಭಾ.ಅ.ಸೇ(ನಿ)

**ಸದಸ್ಯರು**
ಡಾ. ಎಸ್. ರಮೇಶ್, ಭಾ.ಅ.ಸೇ(ನಿ)
ಶ್ರೀ ಎ. ಅಶ್ವಥಯ್ಯ, ಉ.ಅ.ಸಂ(ನಿ)
ಡಾ. ಎ.ಬಿ. ಪಾಟೀಲ, ರಜಿಸ್ಟ್ರಾರ್(ನಿ)
ಶ್ರೀ ಎನ್. ಶಿವರಾಜು, ಉ.ಅ.ಸಂ(ನಿ)
ಶ್ರೀ ಆರ್. ಆಂಜನೇಯರೆಡ್ಡಿ, ಪ್ರಗತಿಪರ ರೈತರು
ಶ್ರೀ ಮಲ್ಲೇಶ್ ಲಿಂಗಾಚಾರ್, ತಂತ್ರಜ್ಞರು
ಡಾ. ಚಂದ್ರಶೇಖರ್ ಬಿರಾದಾರ
ಡಾ. ಟಿ.ಆರ್. ಗುರುಪ್ರಸಾದ್



## ಕಚೇರಿ ವಿಳಾಸ

ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ (ನೋಂ)
ವನವಿಕಾಸ, ನೆಲಮಹಡಿ,
18ನೇ ಅಡ್ಡರಸ್ತೆ, ಮಲ್ಲೇಶ್ವರಂ,
ಬೆಂಗಳೂರು–560003
ದೂ: 080 23566126
Email: iaftbangalore@gmail.com
www.iaft.co.in


## ಮನವಿ

ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆಯು (IAFT) 2013 ರಿಂದ ಬೆಂಗಳೂರು ಕೇಂದ್ರ ಸ್ಥಾನದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಈ ಸಂಸ್ಥೆಯಲ್ಲಿ ಕೃಷಿಅರಣ್ಯದಲ್ಲಿ ಆಸಕ್ತಿಯುಳ್ಳ ಅಖಿಲ ಭಾರತ ಸೇವೆಯ ಹಾಗೂ ಕರ್ನಾಟಕ ರಾಜ್ಯ ಸೇವೆಯ ಹಾಲಿ ಸೇವೆ ಸಲ್ಲಿಸುತ್ತಿರುವ ಮತ್ತು ನಿವೃತ್ತ ಅಧಿಕಾರಿಗಳು, ಕೃಷಿ ವಿಶ್ವವಿದ್ಯಾನಿಲಯದ ಕುಲಪತಿಗಳು ಹಾಗೂ ಪ್ರಾಧ್ಯಾಪಕರು (ಹಾಲಿ ಸೇವೆ ಸಲ್ಲಿಸುತ್ತಿರುವ ಮತ್ತು ನಿವೃತ್ತ), ಪ್ರಗತಿಪರ ರೈತರು, ಕೈಗಾರಿಕೋದ್ಯಮಿಗಳು ಹಾಗೂ ತಂತ್ರಜ್ಞರು ಸದಸ್ಯರಾಗಿರುತ್ತಾರೆ. ಅನುಭವಿ ತಜ್ಞರನ್ನು ಹೊಂದಿರುವ ಈ ಸಂಸ್ಥೆಯು ಸರ್ಕಾರದ ಅರಣ್ಯ, ಕೃಷಿ, ತೋಟಗಾರಿಕಾ ಇಲಾಖೆ ಹಾಗೂ ರೈತರ ನಡುವೆ ಕೊಂಡಿಯಾಗಿ ಕೃಷಿಅರಣ್ಯ ಪ್ರೋತ್ಸಾಹಿಸಲು ತಾಂತ್ರಿಕ ಸಲಹೆ ಹಾಗೂ ಸಹಕಾರ ನೀಡುತ್ತಿದೆ. ಈ ಸಂಸ್ಥೆಗೆ ಸದಸ್ಯರಾಗಲು ಬಯಸುವವರು ಸಂಸ್ಥೆಯ ಜಾಲತಾಣ (www.iaft.co.in) ದಲ್ಲಿ ಲಭ್ಯವಿರುವ ಅರ್ಜಿ ನಮೂನೆಯ ಪ್ರತಿಯ ನಕಲು ಇಳಿಸಿ ಭರ್ತಿ ಮಾಡಿ, ನಿಗದಿತ ಸದಸ್ಯತ್ವ ಶುಲ್ಕವನ್ನು ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆಯ (IAFT) ಈ ಕೆಳಗಿನ ಬ್ಯಾಂಕ್ ಖಾತೆಗೆ ಚೆಕ್ ಅಥವಾ ಡಿಡಿ ಅಥವಾ ನೆಫ್ಟ್ (NEFT) ಮುಖಾಂತರ ಪಾವತಿಸಿ ಸಂಸ್ಥೆಯ ನಿಯಮಾವಳಿಯಂತೆ (Byelaws) ಸದಸ್ಯರಾಗಬಹುದು.

Canara Bank,
18th Cross, Malleshwaram,
Bengaluru.
Account Holder Name: IAFT
SB Account No: 04242010115100
IFSC: CNRB0010424

**ಡಾ. ಎಸ್. ರಮೇಶ್,** ಕಾರ್ಯದರ್ಶಿ

### ಪರಿವಿಡಿ


| ಕ್ರ.ಸಂ. | ಲೇಖನ | ಪುಟ |
|---|---|---|
| 1 | ಕೃಷಿಅರಣ್ಯಗಳು ಮತ್ತು ಇಂಗಾಲದ ಕ್ರೆಡಿಟ್‌ಗಳು ರೂಪಿಸಿದ ನೀತಿ ಚೌಕಟ್ಟು ಮತ್ತು ರೈತರಿಗಿರುವ ಅವಕಾಶಗಳು | 5 |
| 2 | ಮಂಡ್ಯದ ಮಣ್ಣಿನಲ್ಲಿ ಕಾಫಿಯೊಂದಿಗೆ ಕೃಷಿಅರಣ್ಯದ ಕಂಪು | 7 |
| 3 | ಸೀತಾಫಲ (Custard Apple) | 9 |
| 4 | ಜೇನು ಸಾಕಾಣಿಕೆ ಮತ್ತು ದೇಹಸ್ವಾಸ್ಥ್ಯ | 10 |


### ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆಯ ಸದಸ್ಯತ್ವ


| ಸದಸ್ಯತ್ವ ವಿವರ | ಶುಲ್ಕ (ರೂ.) |
|---|---|
| ಸಂಸ್ಥಾ ಸದಸ್ಯತ್ವ | 25,000.00 |
| ಪೋಷಕ ಸದಸ್ಯತ್ವ | 20,000.00 |
| ಆಜೀವ ಸದಸ್ಯತ್ವ | 5,000.00 |
| ರೈತ ಸದಸ್ಯತ್ವ | 2,000.00 |

Publisher: IAFT, Chief Editor: N.D. Tiwari, IFS (Retd), KRUSHIVANA, Quarterly News Letter, October-December 2025, Printed By: S.K. Chandrashekar, Rathna Offset Printers, #120, 1st Main Road, Cauvery Nadhi Road, Brindavana Nagar, Bengaluru-560019

Volume: 7
Issue: 4

## ಸಂಪಾದಕೀಯ...

# ಫುಡ್ ಫಾರೆಸ್ಟ್



ಎನ್.ಡಿ. ತಿವಾರಿ, ಭಾ.ಅ.ಸೇ (ನಿ)
ಅಧ್ಯಕ್ಷರು

ಮಾನವನ ಬದುಕಿಗೆ ಮೂಲಾಧಾರವಾಗಿರುವುದು ಆಹಾರ. ಈ ಪ್ರಪಂಚದಲ್ಲಿ ಅಲೆಮಾರಿಯಾಗಿದ್ದ ಮಾನವ, ಅರಣ್ಯಗಳಲ್ಲಿ ದೊರೆಯುತ್ತಿದ್ದ ಗೆಡ್ಡೆ-ಗೆಣಸುಗಳು, ಹಣ್ಣು, ಹಂಪಲು ಹಾಗೂ ಕಾಡಿನ ಪ್ರಾಣಿಗಳನ್ನು ಬೇಟೆಯಾಡಿ ತನಗೆ ಬೇಕಾದ ಆಹಾರವನ್ನು ಪೂರೈಸಿಕೊಳ್ಳುತ್ತಿದ್ದ, ತರುವಾಯ ಮಾನವ, ಒಂದೆಡೆ ನೆಲೆ ನಿಂತು ಕಾಡುಗಳನ್ನು ಕಡಿದು ಆಹಾರದ ಬೆಳೆಗಳನ್ನು ಬೆಳೆಯಲು ಪ್ರಾರಂಭಿಸಿದ. ಅಂದಿನಿಂದ ಇಂದಿನವರೆಗೂ ಅರಣ್ಯಗಳು ಮಾನವನಿಗೆ ಆಹಾರ, ಆಶ್ರಯ ಆಹಾರವನ್ನು ತಯಾರಿಸಲು ಬೇಕಾದ ಉರುವಲು ಕಟ್ಟಿಗೆ, ಕಚ್ಚಾ ವಸ್ತುಗಳೊಂದಿಗೆ ಗಿಡಮೂಲಿಕೆಗಳನ್ನು ಒದಗಿಸಿ, ಮಾನವನ ನಾಗರೀಕತೆ ಬೆಳೆಯಲು ಸಹಕಾರಿಯಾಗಿತ್ತು. ಆದರೆ ಇತ್ತೀಚಿನ ವರ್ಷಗಳಲ್ಲಿ ಅವಶ್ಯಕತೆಗೂ ಮೀರಿ ಕಾಡುಗಳನ್ನು ನಾಶ ಮಾಡಿ ಇವನೊಬ್ಬನೇ ಬದುಕಬೇಕೆನ್ನುವ ಬಯಕೆಯಿಂದ ಪರಿಸರವನ್ನು ನಾಶಪಡಿಸಿರುತ್ತಾನೆ. ಅದುವೇ ಕಾರಣ ಇಂದು ನಾವುಗಳೆಲ್ಲರೂ ಪ್ರಾಕೃತಿಕ ವಿಪತ್ತುಗಳನ್ನು ಎದುರಿಸಿ ಬದುಕುವ ಸ್ಥಿತಿಗೆ ತಲುಪಿದ್ದೇವೆ. ಇಂದು ವಿಶ್ವದಲ್ಲಿ ಪ್ರಕೃತಿಗೆ ಸಂಬಂಧಿಸಿದಂತೆ ಜಾಗತಿಕ ಉಷ್ಣತೆಯ ಹೆಚ್ಚಳ ಹಾಗೂ ವಾಯು ಮಾಲಿನ್ಯ, ಜಲ ಮಾಲಿನ್ಯಗಳು ಎಲ್ಲೆಡೆ, ಎಲ್ಲರನ್ನು ಎಚ್ಚರಿಸುತ್ತಿವೆ. ಇಂದು ನಾವು ಇವುಗಳನ್ನು ಸರಿಪಡಿಸಿಕೊಂಡು, ಬದುಕಲು ಕಲಿಯಲಿದ್ದರೆ, ಮುಂದೊಂದು ದಿನ ಮಾನವನ ಅಂತ್ಯ ಸಮೀಪಿಸಲಿದೆ.

ಆಹಾರಕ್ಕಾಗಿ ಅರಣ್ಯಗಳು ಅಥವಾ ಕಾಡಿನ ತೋಟಗಳು ಕಡಿಮೆ ನಿರ್ವಹಣೆಯೊಂದಿಗೆ, ತಿನ್ನಲು ಬೇಕಾದ ಆಹಾರವನ್ನೊಳಗೊಂಡ ಪರಿಸರ ವ್ಯವಸ್ಥೆಗಳು, ಸ್ವಾಭಾವಿಕ ಮರಗಳನ್ನೊಳಗೊಂಡ ಭೂ ಪ್ರದೇಶಗಳಾಗಿವೆ. ಇಲ್ಲಿ ಅನೇಕ ವಿಧದ/ಜಾತಿಯ ಸಸ್ಯಗಳೊಂದಿಗೆ, ವಿವಿಧ ಹಂತಗಳಲ್ಲಿ ಅಂದರೆ ಮರಗಳು, ಪೊದೆಗಳು, ಬಳ್ಳಿಗಳು, ಸಣ್ಣ-ಸಣ್ಣ ಸಸ್ಯಗಳು, ಬೇರುಗಳು ಮತ್ತು ಭೂಮಿಯನ್ನು ಆವರಿಸಿಕೊಳ್ಳುವಂತಹ ವಿವಿಧ ಪದರಗಳೊಂದಿಗೆ, ಉತ್ಪಾದಿಸುವಂತಹ ಮತ್ತು ಸ್ವತಃ ಪೋಷಣ ಶಕ್ತಿಯುಳ್ಳ ಆಹಾರ ವ್ಯವಸ್ಥೆಯನ್ನು ಕಡಿಮೆ ಪ್ರಯತ್ನದೊಂದಿಗೆ, ಹಣ್ಣುಗಳು, ಕಾಯಿಗಳು, ಬೀಜಗಳು, ತರಕಾರಿಗಳು ಮತ್ತು ಜೀವ ವೈವಿಧ್ಯತೆಯನ್ನೊಳಗೊಂಡ ಆವಾಸ ಸ್ಥಾನಗಳನ್ನು ಮಣ್ಣಿನಲ್ಲಿ ಅಭಿವೃದ್ಧಿಪಡಿಸಲಿದೆ. ಇದೊಂದು ರೀತಿಯ ಶಾಶ್ವತವಾಗಿ ಬೆಳೆಯುವ ವಿಧಾನವಾಗಿದ್ದು, ಇಲ್ಲಿ ಬಹುವಾರ್ಷಿಕ ಉಪಯುಕ್ತವಾದ ಗಿಡಗಳೊಂದಿಗೆ ಜೈವಿಕ ಕ್ರಿಯೆ ನಡೆಯಲಿದೆ ಮತ್ತು ಸ್ಥಿತಿಸ್ಥಾಪಕತ್ವವನ್ನೊಳಗೊಂಡ ಕಾರ್ಯಗಳಿಂದ ಅಪಾರವಾದ ಪದಾರ್ಥಗಳನ್ನು ಸಣ್ಣ ಅಥವಾ ದೊಡ್ಡ ಸ್ಥಳಗಳಲ್ಲಿ ದೊರಕಿಸಿಕೊಡಲಿದೆ.

ಪ್ರಸ್ತುತದಲ್ಲಿ ಕೈಗೊಂಡಿರುವ ಏಕಬೆಳೆ ಪದ್ಧತಿ, ಕೃಷಿಯಲ್ಲಾಗಲಿ ಅಥವಾ ತೋಟದ/ಕೃಷಿ ಅರಣ್ಯ ಬೆಳೆಯುವಲ್ಲಾಗಲಿ ಅನುಸರಿಸುತ್ತಿರುವುದರಿಂದ, ಜೈವಿಕ ವೈವಿಧ್ಯತೆಯ ವಿನಾಶ, ಮಣ್ಣು ಮತ್ತು ನೀರಿನ ಮಾಲಿನ್ಯ, ನೀರಿನ ಅಭಾವದೊಂದಿಗೆ ಬರದಂತಹ ಪರಿಸ್ಥಿತಿಯನ್ನು ಎದುರಿಸಬೇಕಾಗಿದೆ. ಹೆಚ್ಚುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಆಹಾರ ಉತ್ಪಾದಿಸುವ ಭರದಲ್ಲಿ ಪರಿಸರ ನಾಶ ಮತ್ತು ಹವಾಮಾನ ಬದಲಾವಣೆಯ ಪರಿಣಾಮಗಳು ಎಲ್ಲಾ ಕ್ಷೇತ್ರಗಳಲ್ಲಿಯೂ ಕಾಡುತ್ತಿವೆ. ಇವೆಲ್ಲವುಗಳನ್ನು ಸಮರ್ಥವಾಗಿ ನಿಭಾಯಿಸಲು ಬಹುವಾರ್ಷಿಕ ಮರದ ಬೆಳೆಗಳೊಂದಿಗೆ, ವಿವಿಧ ಸ್ಥರದಲ್ಲಿ ಬಹು ಹಂತದ ಬೆಳೆಗಳನ್ನು ಬೆಳೆಯುವುದರಿಂದ ಮಣ್ಣಿನ ಸಂರಕ್ಷಣೆ, ಫಲವತ್ತತೆಯ ರಕ್ಷಣೆ, ಜೀವ ವೈವಿಧ್ಯತೆಯ ರಕ್ಷಣೆ ಹಾಗೂ ವನ್ಯಜೀವಿಗಳನ್ನು ಸಹ ಸಮತೋಲನ ವ್ಯವಸ್ಥೆಯಲ್ಲಿ ರಕ್ಷಿಸಲು ಸಾಧ್ಯವಾಗಲಿದೆ.

ಇದನ್ನು ನಿರ್ವಹಿಸಲು ಇಂತಿಷ್ಟೇ ಭೂಮಿಯಿರಬೇಕೆಂದಿಲ್ಲ. ಇರುವ ಭೂಮಿಯಲ್ಲಿಯೇ ಅಂದರೆ ಮನೆಯ ಹಿಂಭಾಗದ ಭೂಮಿ, ಕೈ ತೋಟಗಳು ಹಾಗೂ ಇರುವ ಕೃಷಿ ಭೂಮಿಯಲ್ಲಿಯೇ ನಿರ್ವಹಿಸಲು ಸಾಧ್ಯ. ಇದರಿಂದ ಜೈವಿಕವಾಗಿ ಸಾಮಾಜಿಕ ಒಡೆತನದ ಪರಿಸರವನ್ನು ಸೃಷ್ಟಿಸಿದಂತಾಗುವುದು. ಇಲ್ಲಿ ವನ್ಯಜೀವಿಗಳಿಗೆ, ಕೀಟಗಳಿಗೆ (ಜೇನು ಹುಳುಗಳು), ಚಿಟ್ಟೆಗಳು ಹಾಗೂ ಸಾಕು ಪ್ರಾಣಿಗಳಿಗೂ ಸಹ ಅವಕಾಶವನ್ನು ಕಲ್ಪಿಸಲು ಸಾಧ್ಯವಾಗಲಿದೆ. ಇದರೊಂದಿಗೆ ಹವಾಮಾನ ಬದಲಾವಣೆಯ ಪರಿಣಾಮಗಳನ್ನು ಕಡಿಮೆಗೊಳಿಸಲು ಕೈಗೊಂಡ ಅಳಿಲು ಸೇವೆಯಾಗಲಿದೆ. ಇದು ನಮ್ಮ ಆಹಾರ ಸರಪಳಿಯನ್ನು ಮುಂದುವರಿಸಲು ಅವಶ್ಯವಾದ ಭದ್ರ ಬುನಾದಿಯಾಗಲಿದೆ.

ಆಹಾರದ ಅರಣ್ಯಗಳ ಕೆಳಗಿನ ಸ್ತರದಲ್ಲಿ ಪೊದೆಗಳು, ಸಣ್ಣ ಸಣ್ಣ ಮರಗಳು, ವನಸ್ಪತಿ, ಬಳ್ಳಿಗಳು ಆಹಾರ ಉತ್ಪಾದನೆಯನ್ನು ಹೆಚ್ಚಿಸುವಲ್ಲಿ ಸಹಕಾರಿಯಾಗಲಿವೆ. ಜೊತೆಗೆ ಜೀವ ವೈವಿಧ್ಯತೆ ರಕ್ಷಣೆ, ಮಣ್ಣಿನ ಆರೋಗ್ಯ ಮತ್ತು ಗಾಳಿಯಲ್ಲಿಯ ಸಸಾರಜನಕ ($N_2$) ಸ್ಥಿರೀಕರಿಸುವುದು, ಕೆಳ ಹಂತದಲ್ಲಿ ಸಮರ್ಥವಾಗಿ ಸೂರ್ಯನ ಬೆಳಕನ್ನು ಬಳಸಿಕೊಂಡು ಪರಿಸರ ವ್ಯವಸ್ಥೆಯ ಸಬಲೀಕರಣಗೊಳಿಸುವುದರಿಂದ, ವಿವಿಧ ಆವಾಸ ಸ್ಥಾನಗಳನ್ನು ಪರಾಗಸ್ಪರ್ಶ ನಿರ್ವಹಿಸುವ ಕೀಟಗಳಿಗೆ/ವನ್ಯಜೀವಿಗಳಿಗೆ ಒದಗಿಸುವುದು. ಮಣ್ಣಿನ ಫಲವತ್ತತೆ ಹೆಚ್ಚಿಸುವುದು, ನೆರಳನ್ನು ಕೆಳಗಿನ ಭೂಮಿಗೆ ನೀಡುವುದರಿಂದ ಅನಾವಶ್ಯಕ ಕಳೆಯ ನಿಯಂತ್ರಣದೊಂದಿಗೆ ತೇವಾಂಶ ರಕ್ಷಣೆಯಾಗುವುದು, ಇದರಿಂದಾಗಿ ಬಹು ಹಂತದ ಯೋಗ್ಯವಾದ ಪರಿಸರ ವ್ಯವಸ್ಥೆಯನ್ನು ನೀಡಲಿದೆ.

ಈಗಾಗಲೇ ದಕ್ಷಿಣ ಅಮೇರಿಕಾ ದೇಶದಲ್ಲಿ ಹಲವಾರು ಫುಡ್‌ಫಾರೆಸ್ಟ್‌ಗಳನ್ನು ಮನೆಯ ಹಿಂಭಾಗದಲ್ಲಿ ಬೆಳೆದು, ಶೇ.50 ರ ಆಹಾರ ಪೂರೈಕೆಯನ್ನು ಇವುಗಳಿಂದ ಪಡೆಯುತ್ತಿದ್ದಾರೆ. ಈ ವ್ಯವಸ್ಥೆಯು ಋತು ಮಾನಗಳ ವ್ಯತ್ಯಯದಿಂದ ಉಂಟಾಗುವ ಆಹಾರದ ಕೊರತೆಯನ್ನು ನೀಗಿಸಲಿವೆ. ಉದಾಹರಣಾರ್ಥವಾಗಿ ಹೇಳಬೇಕೆಂದರೆ, ಬರಗಾಲ, ಮಹಾಪೂರ ಮತ್ತು ಯುದ್ಧಗಳಂತಹ ಸಂದರ್ಭಗಳಲ್ಲಿ ಉಂಟಾಗುವ ಆಹಾರದ ಕೊರತೆಯನ್ನು ನೀಗಿಸಲು ವಿಮೆಯಂತೆ ಕಾರ್ಯ ನಿರ್ವಹಿಸಲಿದೆ. ಅಷ್ಟೇ ಅಲ್ಲದೆ ಜನರ ಆರೋಗ್ಯದಲ್ಲಿ ಉಂಟಾಗುವ ಪೋಷಕಾಂಶಗಳ ಕೊರತೆಯನ್ನು ನೀಗಿಸುವಲ್ಲಿಯೂ ಸಹ ವಿಮೆಯಂತೆ ಉಪಯುಕ್ತವಾಗಿವೆ.

ಇಂತಹ ಅರಣ್ಯಗಳಲ್ಲಿ ನಮಗೆ ಬೇಕಾದ ಹಣ್ಣು ಮತ್ತು ತರಕಾರಿಗಳು ಸಹ ದೊರೆಯುತ್ತವೆ. ಉದಾ: ಹಲಸು-ಹಲಸಿನ ಕಾಯಿಯನ್ನು ತರಕಾರಿಯಾಗಿ ಹಾಗೂ ಹಣ್ಣಾಗಿಯೂ ಬಳಸಲು ಸಾಧ್ಯ. ಇಂತಹ ವ್ಯವಸ್ಥೆಯಿಂದ ನಮಗೆ ಬೇಕಾದ ವಿಷಮುಕ್ತ ಆಹಾರವನ್ನು ನಾವೇ ಬೆಳೆಯುವ ಕೃಷಿ ಒಂದೆಡೆಯಾದರೆ ಹಣಕಾಸಿನ ಉಳಿತಾಯಕ್ಕೂ ನಾಂದಿ ಹಾಡಲಿದೆ.

ನಾವು ವಾಸಿಸುವ ಸುತ್ತಮುತ್ತಲಿನ ಭೂಮಿಯಲ್ಲಿ ಇವುಗಳನ್ನು ಬೆಳೆಯುವುದರಿಂದ ಶಾರೀರಿಕವಾಗಿಯೂ ಹಾಗೂ ಮಾನವರಿಗೆ ಬೇಕಾದ ಪ್ರೋಟೀನ್‌ಅಂಶಗಳನ್ನು ಪಡೆದುಕೊಳ್ಳಬಹುದು. ಇವುಗಳು ರಸಾಯನಿಕ ಮುಕ್ತವಾಗಿರುವುದರಿಂದ ಮಾನವನ ಭೌತಿಕ ಆರೋಗ್ಯ ರಕ್ಷಣೆಗಷ್ಟೇ ಅಲ್ಲದೇ ಮಾನಸಿಕ ಆರೋಗ್ಯ ರಕ್ಷಣೆಗೂ ದೊಡ್ಡ ಕೊಡುಗೆಯನ್ನು ನೀಡಲಿವೆ. ಇಂತಹ ಸ್ಥಳಗಳಲ್ಲಿ ಓಡಾಡುವುದರಿಂದ ಮಾನಸಿಕ ಆರೋಗ್ಯಕ್ಕೆ ಅವಶ್ಯವುಳ್ಳ ಡೋಪಾಮೀನ್ ಮತ್ತು ಸೆರೆಟೋನಿನ್ ರಸಾಯನಿಕಗಳು ದೊರೆಯುವುದರಿಂದ, ಮಾನಸಿಕ ಆರೋಗ್ಯ ರಕ್ಷಣೆಯಾಗಲಿದೆ.

ಇವೆಲ್ಲದಕ್ಕೂ ಮುಖ್ಯವಾಗಿ ಮಕ್ಕಳು ಶಾಲೆಯ ಬಿಡುವಿನ ವೇಳೆಯಲ್ಲಿ ಇಂತಹ ಪ್ರದೇಶಗಳಲ್ಲಿ ಓಡಾಡುವುದರಿಂದ ಅವರಿಗೆ ದುಂಬಿಗಳು, ಕೀಟಗಳು, ಸಸ್ಯಗಳು ಕಂಡುಬರುವುದರಿಂದ ಇದೊಂದು ಬಗೆಯ ನೈಸರ್ಗಿಕ ಪ್ರಯೋಗಶಾಲೆಯಾಗಲಿದೆ. ಇಲ್ಲಿ ಕೀಟಶಾಸ್ತ್ರ, ಜೀವಶಾಸ್ತ್ರ, ಭೌತಶಾಸ್ತ್ರ, ಸಸ್ಯಶಾಸ್ತ್ರದ ಅಧ್ಯಯನಕ್ಕೆ ವಿಫುಲ ಅವಕಾಶಗಳಿದ್ದು, ಮಕ್ಕಳನ್ನು ಪ್ರಕೃತಿ ಪ್ರಿಯರಾಗಿ, ಉತ್ತಮ ಪ್ರಜೆಗಳನ್ನಾಗಿ ಮಾಡಲು ಇರುವ ಪ್ರಕೃತಿಯ ಪಾಠಶಾಲೆಯಾಗಲಿದೆ!

# ಕೃಷಿಅರಣ್ಯಗಳು ಮತ್ತು ಇಂಗಾಲದ ಕ್ರೆಡಿಟ್‌ಗಳು ರೂಪಿಸಿದ ನೀತಿ ಚೌಕಟ್ಟು ಮತ್ತು ರೈತರಿಗಿರುವ ಅವಕಾಶಗಳು



**ಚಂದ್ರಶೇಖರ್ ಬಿರಾದಾರ, ಸಂಸ್ಥಾಪಕರು ಮತ್ತು ಸಿಎಂಡಿ ಜಿಜಿಜಿಸಿ ಹಾಗೂ**
**ಹೆಚ್.ಜಿ. ಶಿವಾನಂದಮೂರ್ತಿ, ಭಾ,ಅ.ಸೇ (ನಿ)**

ಕೃಷಿಅರಣ್ಯವು ಪ್ರಪಂಚದಾದ್ಯಂತ ಹವಾಮಾನ ಬದಲಾವಣೆಯನ್ನು ನಿಯಂತ್ರಿಸಲಿರುವ ಮಾರ್ಗೋಪಾಯವೆಂದು ಎಲ್ಲರ ಗಮನ ಸೆಳೆದಿದೆ. ಇದರಿಂದ ಅವನತಿ ಹೊಂದಿರುವ ಭೂಮಿಯ ಪುನಶ್ಚೇತನ ಮತ್ತು ಗ್ರಾಮೀಣ ಭಾಗದಲ್ಲಿ ಆದಾಯ ತರುವ ನಿಶ್ಚಿತವಾದ ವಿಚಾರವಾಗಿದ್ದು, ಇದನ್ನು ಅನುಷ್ಠಾನಗೊಳಿಸಲು ಬೇಕಾಗಿರುವ ನೀತಿ, ನಿಯಮಗಳು ಮತ್ತು ಆಯವ್ಯಯ (ಬಜೆಟ್)ದಲ್ಲಿಯೂ ರೈತ ಪರವಾದ ಯೋಜನೆಯೆಂದು ಸೇರ್ಪಡೆಯಾಗಿದೆ. ರಾಜ್ಯದಲ್ಲಿ ಕೃಷಿ ಅರಣ್ಯವನ್ನು ಹಸಿರಿನ ಬೆಳವಣಿಗೆಯ ಕೇಂದ್ರ ಬಿಂದುವಾಗಿ, ಜೊತೆಗೆ ಇದು ಅರಣ್ಯ, ವನ್ಯಜೀವಿ ಮತ್ತು ಹವಾಮಾನ ಬದಲಾವಣೆಯ ನಿಯಂತ್ರಿಸುವ ಬುನಾದಿಯಾಗಿದ್ದು, ಇಲ್ಲಿ ಇಂಗಾಲದ ಕ್ರೆಡಿಟ್‌ಅನ್ನು ಮರ–ಆಧಾರಿತ ಭೂಮಿಯ ಪುನಶ್ಚೇತನಗೊಳಿಸುವುದೂ ಸೇರಿದಂತೆ, ಕೃಷಿಅರಣ್ಯದಲ್ಲಿ ಅರಣ್ಯದ ಹೊರಗಿನ ಮರಗಳ (TOF) ರೈತನ ಜಮೀನುಗಳಲ್ಲಿ ಬೆಳೆಯಲು, ಕಟಾವು ಮಾಡಲು ಮತ್ತು ಮಾರುಕಟ್ಟೆಯ ಮಾರ್ಗಗಳನ್ನು ಸರಳೀಕರಣಗೊಳಿಸುವುದಾಗಿದೆ.

"ಮರ ಬೇಳೆದರೆ ಹಣ ಬರುತ್ತಾ"

"ಕಾರ್ಬನ್ ಕ್ರೆಡಿಟ್ ನಿಯವಾಗಿಯೂ ರೈತನ ಕೈಗೆ ಬರುತ್ತಾ"

"ಹಾಗಿದ್ದರೆ ಎಷ್ಟು ವರ್ಷದಲ್ಲಿ ಆದಾಯ ಬರುತ್ತೆ"

ರಾಷ್ಟ್ರ ಮಟ್ಟದಲ್ಲಿ ಕೃಷಿ ಅರಣ್ಯವನ್ನು ಅನಧಿಕೃತವಾಗಿ ಪ್ರಧಾನ ಮಂತ್ರಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (PM-RKVY) ಯಲ್ಲಿ ಸೇರ್ಪಡೆಯಾಗಿದೆ, ಮತ್ತು ಕರ್ನಾಟಕ ರಾಜ್ಯದ ಕೃಷಿಅರನ್ಯದ ಕ್ರಿಯಾ ಯೋಜನೆಯನ್ನು ಜಾರಿಗೊಳಿಸಿದ ರಾಜ್ಯಗಳಲ್ಲಿ ಮೊದಲನೆಯದಾಗಿದ್ದು, ಸಸ್ಯಕ್ಷೇತ್ರಗಳಲ್ಲಿ ಉತ್ಕೃಷ್ಟ ಗುಣಮಟ್ಟದ ಸಸಿಗಳ ತಯಾರಿಸಲು ಮತ್ತು ಖರೀದಿಸಲು ವ್ಯವಸ್ಥೆ ಮತ್ತು ರೈತರಿಗೆ ತರಬೇತಿ ನೀಡಲು ಸಹ ಯೋಜಿಸಿದೆ. ಈ ರೀತಿಯ ಎಲ್ಲಾ ಸಮಗ್ರ ಕ್ರಮಗಳನ್ನು ರೈತರಿಗೆ ಇಂಗಾಲದ ಕ್ರೆಡಿಟ್ ಕಾರ್ಯಕ್ರಮಗಳನ್ನು ಬೆಂಬಲಿಸುವುದಾಗಿದ್ದು, ಇದರಿಂದ ಕೇವಲ ರೈತರು ನಿಷ್ಕ್ರಿಯ ಬೆಳೆಗಾರರಷ್ಟೇ ಅಲ್ಲದೆ, ಹವಾಮಾನ ಬದಲಾವಣೆ ಮತ್ತು ಪರಿಸರ ಪುನಶ್ಚೇತನ ಕಾರ್ಯತಂತ್ರ ರೂಪಿಸುವಲ್ಲಿ ಕ್ರಿಯಾಶೀಲ ಭಾಗೀದಾರರಾಗಲಿದ್ದು, ಇದರಿಂದ ಅನೇಕ ತರಹದ ಆದಾಯವನ್ನು ಹಣ್ಣುಗಳಿಂದ, ಟಿಂಬರ್, ಮೇವನ್ನು ಬೆಳೆಯುವುದರೊಂದಿಗೆ ಇಂಗಾಲದ ಮಾರುಕಟ್ಟೆಯ ಲಾಭಗಳನ್ನು ಪಡೆಯಲು ಸಾಧ್ಯವಾಗಲಿದೆ. ಜೊತೆಗೆ ಅವರ ಭೂಮಿಯ ಪುನಶ್ಚೇತನದೊಂದಿಗೆ ಭವಿಷ್ಯದ ರಕ್ಷಣೆ ಸಾದ್ಯವಾಗಲಿದೆ.

**ಕೃಷಿವನದಲ್ಲಿ ಕಾರ್ಬನ್ ಕ್ರೆಡಿಟ್‌ಗಳು:**

ಮರಗಳನ್ನು ಕೃಷಿ ಜಮೀನಿನಲ್ಲಿ ಬೆಳೆದಾಗ, ಸ್ವಾಭಾವಿಕವಾಗಿ ವಾತಾವರಣದಲ್ಲಿಯ ಇಂಗಾಲದ ಡೈ ಆಕ್ಸೈಡ್ ನ್ನು ಪಡೆದುಕೊಂಡು, ಮರಗಳು ತನ್ನ ರೆಂಬೆ ಕೊಂಬೆಗಳು, ಎಲೆಗಳು, ಬೇರುಗಳಲ್ಲಿ ಮತ್ತು ಮಣ್ಣಿನಲ್ಲಿ ಶೇಖರಿಸಿಡುವುದನ್ನು ಇಂಗಾಲದ ಸ್ಥಿರೀಕರಣವೆನ್ನಲಾಗುವುದು. ಈ ಸೇವೆಗೆ ಜಾಗತಿಕ ಮಾರುಕಟ್ಟೆಯಲ್ಲಿ ಹೆಚ್ಚಿನ ಮೌಲ್ಯವಿದ್ದು, ಸರ್ಕಾರಗಳು ಮತ್ತು ಕಂಪನಿಗಳು ಕಾರ್ನನ್ ಕ್ರೆಡಿಟ್ ಮೂಲಕ ರೈತರಿಗೆ ಪಾವತಿಸಲು ಸಿದ್ಧವಾಗಿವೆ, ಇದು ರೈತರಿಗೆ ಹೆಚ್ಚುವರಿ ಆದಾಯವಾಗಲಿದೆ. ಇಂದು ಕರ್ನಾಟಕದಲ್ಲಿ ಕೃಷಿಅರಣ್ಯವನ್ನು ನೆರಳಿಗಾಗಿ, ಮೇವಿಗಾಗಿ ಅಥವಾ ಮಣ್ಣಿನ ಫಲವತ್ತತೆ ಹೆಚ್ಚಿಸುವುದಕ್ಕೆ ಬೆಳೆಯುವುದಲ್ಲದೇ, ಸುಸ್ಥಿರ ಕೃಷಿಯ ಕೇಂದ್ರ ಬಿಂದುವಾಗಿ, ಹವಾಮಾನ ಸ್ಥಿತಿಸ್ಥಾಪಕತ್ವ ಮತ್ತು ರೈತರ ಶ್ರೇಯೋಭಿವೃದ್ಧಿಗಾಗಿ ಹೊರ ಹೊಮ್ಮಿರುವ ನವೀನ ತಾಂತ್ರಿಕತೆಯಾಗಿದೆ. ರಾಜ್ಯದ ಕೃಷಿಅರಣ್ಯ ನಿತಿಯ ಮುನ್ನೋಟದಲ್ಲಿ ಮತ್ತು ಪ್ರಧಾನ ಮಂತ್ರಿಗಳ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಲ್ಲಿ ರೈತರಿಗೆ ಇದುವರೆಗೂ ಇರದ ಹೊಸ ಅವಕಾಶಗಳನ್ನು ತೆರೆದಿಟ್ಟಿದೆ. ಆದರೆ ಇದರಿಂದ ದೊರೆಯುವ ನಿಜವಾದ ಲಾಭವೆಂದರೆ ಪರಿಸರ ರಕ್ಷಣೆ, ಜೀವ ವೈವಿಧ್ಯತೆಯ ರಕ್ಷಣೆ ಮತ್ತು ದೀರ್ಘಕಾಲದಲ್ಲಿ ಸಮತೋಲನದ ಉತ್ಪಾದನೆಯೊಂದಿಗೆ ಲಾಭ ಪಡೆಯುವುದಾಗಿದೆ.

**ಕರ್ನಾಟಕದ ಕೃಷಿಅರಣ್ಯ ನೀತಿ ಮತ್ತು ಮುಂಗಡ ಪತ್ರದಲ್ಲಿಯ ಹೊಸತನ:**

ರಾಜ್ಯದ 2025ನೇ ಸಾಲಿನ ಮುಂಗಡ ಪತ್ರದಲ್ಲಿ ಕರ್ನಾಟಕ ಸರ್ಕಾರವು ಮಹತ್ವದ ಹೆಜ್ಜೆಯಿಟ್ಟಿದ್ದು, ಅರಣ್ಯ, ವನ್ಯಜೀವಿ ಮತ್ತು ಹವಾಮಾನ ಬದಲಾವಣೆ ನಿಯಂತ್ರಿಸಲು ಫೌಂಡೇಶನ್ ಸ್ಥಾಪಿಸಿದೆ. ಇದರ ಪ್ರಮುಖ ಗುರಿ ಕೃಷಿಅರಣ್ಯ ಮತ್ತು ಅರಣ್ಯದ ನೆಡುತೋಪುಗಳನ್ನು ಕಾರ್ಬನ್ ಕ್ರೆಡಿಟ್‌ಗಾಗಿ ಬೆಳೆಸುವುದಾಗಿದೆ. ಇದರ ಭಾಗವಾಗಿ ರಾಜ್ಯದಲ್ಲಿ 3.5 ಲಕ್ಷ ಸಸಿಗಳನ್ನು 1200 ಹೆಕ್ಟೇರ್ ಅರಣ್ಯೇತರ ಭೂಮಿಯಲ್ಲಿ ಬೆಳೆಸುವ ಗುರಿ ಹೊಂದಿದ್ದು, ವಿಶೇಷವಾಗಿ ಹೆಚ್ಚು ಕಾರ್ಬನ್ ಪಡೆದುಕೊಳ್ಳುವ, ಅದರಲ್ಲಿಯೂ ಪರಿಸರ ಪುನಶ್ಚೇತನಕ್ಕೆ ಹೆಚ್ಚು ಸಹಕರಿಸುವ ಮತ್ತು ರೈತರ ಆದಾಯ ಹೆಚ್ಚಿಸುವ ಪ್ರಬೇಧಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಬಹು ಮುಖ್ಯವಾಗಿ ಅರಣ್ಯದ ಹೊರಗಿನ ಮರಗಳ ನಿಟ್ಟಿನಲ್ಲಿ ನಿಯಮಗಳನ್ನು ಸರಳೀಕರಣಗೊಳಿಸುವ ಮೂಲಕ ರೈತರಿಗೆ ಹೆಚ್ಚಿನ ಸ್ವಾತಂತ್ರ್ಯವನ್ನು ಕಟಾವಿಗೆ ಮತ್ತು ಮಾರುಕಟ್ಟೆ ಅವಕಾಶವನ್ನು ಅಧಿಕಾರಶಾಹಿಯ ಹಿಡಿತದಿಂದ ತಪ್ಪಿಸಲು ನಿರ್ಧರಿಸಲಾಗಿದೆ. ಭಾರತದ ಪ್ರಧಾನ ಮಂತ್ರಿಗಳ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (PM RKVY) ಕೃಷಿಅರಣ್ಯ ಕಾರ್ಯ ಯೋಜನೆಯೊಂದಿಗೆ ಹೊಂದಾಣಿಕೆಯಾಗಿರುವ ಈ ಕ್ರಮಗಳು ರೈತರನ್ನು ಸುಸ್ಥಿರ ಹೊಸ ಕಾರ್ಬನ್ ಮಾರುಕಟ್ಟೆ ಮತ್ತು ಮೌಲ್ಯ ಸರಪಳಿಗೆ ಸೇರ್ಪಡಿಸಲಿದೆ.

**ಉತ್ತರ ಪ್ರದೇಶ ಮತ್ತು ಕರ್ನಾಟಕದಲ್ಲಿ ಕೈಗೊಂಡ ಪ್ರಾಯೋಗಿಕ ಕಾರ್ಯಕ್ರಮಗಳು:**

ರಾಷ್ಟ್ರದಲ್ಲಿ ಪ್ರಾಯೋಗಿಕವಾಗಿ ಎರಡು ರಾಜ್ಯಗಳಲ್ಲಿ ಕೃಷಿವನದಿಂದ ಇಂಗಾಲದ ಕ್ರೆಡಿಟ್‌ಗಳನ್ನು ಪಡೆಯಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಅದರಲ್ಲಿ ಉತ್ತರ ಪ್ರದೇಶಗಳಲ್ಲಿ ಈ ಕಾರ್ಯಕ್ರಮವು ಯಶಸ್ವಿ ಪರಿಣಾಮವನ್ನು ತೋರಿಸಿದೆ. ಆದರೆ ಇಂತಹ ಕಾರ್ಯಕ್ರಮಗಳು ಸದಾಕಾಲ ಪರಿಸರ ರಕ್ಷಣೆಯ ಗುರಿಯೊಂದಿಗೆ ವೇಗವಾಗಿ ಬೆಳೆಯುವ ಏಕಬೆಳೆ ಪದ್ಧತಿಯನ್ನು ದೂರವಿಟ್ಟು, ಭೂಮಿಯ ರಕ್ಷಣೆ ಮತ್ತು ನೀರಿನ ಆರೋಗ್ಯ, ಜೈವಿಕ ವೈವಿಧ್ಯತೆ ಮತ್ತು ಸುಸ್ಥಿರ ಪದ್ಧತಿಗಳನ್ನು ಅಭಿವೃದ್ಧಿ ಪಡಿಸುವತ್ತ ಸಾಗಬೇಕಿದೆ. ವೇಗವಾಗಿ ಬೆಳೆಯುವ ಮರದ ಪ್ರಭೇದಗಳಿಂದ ಕಾರ್ಬನ್ ಸ್ಥಿರೀಕರಣ ಮಾಡುವುದರಿಂದ ಆಹಾರ ಭದ್ರತೆಗೆ, ಜೀವ ವೈವಿಧ್ಯತೆ ಮತ್ತು ಮಣ್ಣಿನ ಆರೋಗ್ಯಕ್ಕೆ ಕುತ್ತು ತರಲಿದೆ. ಇಲ್ಲಿ ನಮಗೆ ಬೇಕಾಗಿರುವುದು ಸಮತೋಲನದ ಹಾಗೂ ಪುನಶ್ಚೇತನದ ಕೃಷಿಅರಣ್ಯ ಪದ್ಧತಿಗಳು ಬಹು ಹಂತದಲ್ಲಿ ಲಾಭವನ್ನು ತರುವಂತಿರಬೇಕು. ಇದಕ್ಕಿಂತಲೂ ಹೆಚ್ಚಿನ ಸವಾಲಿರುವುದು ಸರ್ಕಾರಗಳಿಗೆ ಮತ್ತು ನೀತಿ ನಿರೂಪಕರಿಗೆ, ಯೋಜನೆಯ ರೂಪು ರೇಷೆಗಳನ್ನು ತಯಾರಿಸುವಲ್ಲಿ ಅವುಗಳು ಗಂಭೀರ ಪರಿಣಾಮಗಳನ್ನು ಬೀರುವಂತಿರಬೇಕು ಮತ್ತು ಪಾರದರ್ಶಕವಾಗಿದ್ದು, ಸುಸ್ಥಿರತೆಯನ್ನು ಗಮನದಲ್ಲಿಟ್ಟುಕೊಂಡು, ಯಾವುದೇ ಏಳು–ಬೀಳುಗಳಿಲ್ಲದಂತೆ ದೀರ್ಘಕಾಲದಲ್ಲಿ ರೈತರಿಗೆ ಮತ್ತು ಪರಿಸರಕ್ಕೆ

ಲಾಭವಾಗುವಂತಿರಬೇಕು. ಈಗಾಗಲೇ ನಡೆಯುತ್ತಿರುವ ಕಾರ್ಬನ್ ಕ್ರೆಡಿಟ್ ಯೋಜನೆಗಳು ಹೆಚ್ಚಿನ ಒತ್ತನ್ನು ಜೀವರಾಶಿಯ ಉತ್ಪಾದನೆಯತ್ತ ಮತ್ತು ಜಮೀನುಗಳ ಅಂಚಿನಲ್ಲಿ ಮರವನ್ನು ಬೆಳೆಯುವುದಾಗಿದೆ. ಇಲ್ಲಿ ಸಸಿಗಳನ್ನು ಅರಣ್ಯ ಇಲಾಖೆಯು ಉಚಿತವಾಗಿ ಪೂರೈಸಿರುತ್ತದೆ. ಇಂತಹ ಪ್ರಾಯೋಗಿಕ ಯೋಜನೆಗಳಿಂದ ಪಡೆಯುವ ಹಣ್ಣು, ಟಿಂಬರ್‌ನಿಂದ ಪಡೆಯುವ ಆದಾಯಕ್ಕಿಂತ ಹೆಚ್ಚಾಗಿ ಕಾರ್ಬನ್ ಕ್ರೆಡಿಟ್ ಮೂಲಕ ಹೊಸ ಆದಾಯದ ಮಾರ್ಗಗಳನ್ನು ತೆರೆದಿದೆ, ಆದರೆ ಪಾವತಿಯಲ್ಲಿಯ ವಿಳಂಬಧೋರಣೆ ಮತ್ತು ಪಾರದರ್ಶಕತೆಯ ಕೊರತೆಯು ಸವಾಲಾಗಿದೆ.

**ರೈತರು ಗಮನಿಸಬೇಕಾದ ಅಂಶಗಳು:**

"ಕೃಷಿಅರಣ್ಯ + ಕಾರ್ಬನ್ ಕ್ರೆಡಿಟ್= ರೈತರ ಭವಿಷ್ಯ"

ಹೊಸ ಅವಕಾಶಗಳು ಬಂದಾಗ ಜವಾಬ್ದಾರಿಯು ಹೆಚ್ಚಾಗಲಿದೆ. ಕೃಷಿವನವನ್ನು ಹೆಚ್ಚು ಲಾಭದಾಯಕವಾಗಿಸಲು ರೈತರು ಎಚ್ಚರಿಕೆಯಿಂದ ಯೋಜನೆ ನಿರ್ವಹಿಸಬೇಕು. ಸರಿಯಾದ ಮರಗಳ ಆಯ್ಕೆಯ ಜೊತೆಗೆ ವಿವಿಧ ಮರಗಳನ್ನು ಒಟ್ಟಿಗೆ ಬೆಳೆಸುವುದು ಸಹ ಅಷ್ಟೇ ಮುಖ್ಯ. ವೇಗವಾಗಿ ಬೆಳೆಯುವ ಮರಗಳು ಹೆಚ್ಚು ಕಾರ್ಬನ್‌ಅನ್ನು ಸ್ಥಿರೀಕರಿಸಬಹುದು. ಆದರೆ ಆಹಾರದ ಬೆಳೆಗಳಿಗೆ ಸಮಸ್ಯೆ ಒಡ್ಡುತ್ತವೆ. ಮಣ್ಣಿನ ಫಲವತ್ತತೆ ಕಡಿಮೆಗೊಳಿಸುವುದು ಅಥವಾ ಹೆಚ್ಚು ನೀರು ಬಳಸಲಿವೆ. ಆದರೆ ಮಿಶ್ರ ಜಾತಿಯ ಮರಗಳೊಂದಿಗೆ ಹಣ್ಣು, ಮೇವು, ಬಹು ಉಪಯೋಗಿ ಮತ್ತು ಚೌಬೀನೆಯನ್ನು ನೀಡುವ ಮರಗಳು ಆದಾಯವನ್ನು ಸಮತೋಲನಗೊಳಿಸುವುದರೊಂದಿಗೆ ಪರಿಸರದ ಆರೋಗ್ಯ ರಕ್ಷಿಸುತ್ತದೆ. ಬಹು ಮುಖ್ಯವಾಗಿ ಬೆಳೆಸುವ ಸಸಿಗಳ ಗುಣಮಟ್ಟ ಪ್ರಧಾನ ಮಂತ್ರಿಗಳ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ ಮಾರ್ಗ ಸೂಚಿಯಂತಿರಬೇಕು. ಏಕೆಂದರೆ ಆರೋಗ್ಯವಂತ ಸಸಿಗಳಿಂದ ಉತ್ತಮ ಬೆಳವಣಿಗೆ ಮತ್ತು ದೀರ್ಘಕಾಲದಲ್ಲಿ ಹೆಚ್ಚು ಉತ್ಪಾದನೆಯಾಗಲಿದೆ. ರೈತರು ಸಹ ಮರಗಳ ಒಡೆತನದ ಬಗ್ಗೆ ಮತ್ತು ಕಟಾವಿಗೆ ಸಂಬಂಧಿಸಿದಂತೆ ಹಾಗೂ ಸಾಗಾಣಿಕೆಗೆ ಇರುವ ಕಾನೂನುಗಳ ಬಗ್ಗೆ ತಿಳುವಳಿಕೆಯುಳ್ಳವಾಗಿರಬೇಕು. ಕಾರ್ಬನ್ ಕ್ರೆಡಿಟ್ ಯೋಜನೆಗಳಲ್ಲಿ ಸೇರಲು ಒಪ್ಪಂದದ ಷರತ್ತುಗಳು, ಪಾವತಿ ವೇಳಾಪಟ್ಟಿ ಮತ್ತು ಪರಿಶೀಲನೆಯ ವಿಧಾನಗಳನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಇವೆಲ್ಲಕ್ಕೂ ಆರ್ಥಿಕವಾಗಿ ಕೃಷಿವನ ಕಾರ್ಯಕ್ರಮವು ದೀರ್ಘಕಾಲದ ಹಾಗೂ ಒಂದೇ ಋತುಮಾನದಲ್ಲಿ ಕಟಾವು ಮಾಡಲು ಸಾಧ್ಯವಿಲ್ಲವೆಂದು ಹಾಗೂ ಕಟಾವಣೆಗೆ ವರ್ಷಗಳೇ ಬೇಕಾಗುತ್ತದೆಂಬುದನ್ನು ಅರಿತಿರಬೇಕು. ಆದರೇ ಅಂತಿಮವಾಗಿ ಆದಾಯವು ವಿವಿಧ ರೀತಿಯಲ್ಲಿ ಅಂದರೆ ಹಣ್ಣುಗಳಿಂದ, ಚೌಬೀನೆಯಿಂದ, ಮೇವಿನಿಂದ ಜೊತೆಗೆ ಇಂಗಾಲದ ಕ್ರೆಡಿಟ್‌ಗಳ ಮುಖಾಂತರ ಗಳಿಸಬಹುದೆಂಬ ಜ್ಞಾನವುಳ್ಳವರಾಗಿದ್ದು, ಇದೊಂದು ರೀತಿಯ ಪರಿಸರ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡ ತೃಪ್ತಿಯಿರಬೇಕು.

**ಮರ ಆಧಾರಿತ ಆಹಾರ ಮತ್ತು ಸುಸ್ಥಿರ ಉತ್ಪಾದನಾ ಪದ್ಧತಿ:**

ಮರ ಆಧಾರಿತ ಆಹಾರವು ರೈತರ ಹೃದಯಕ್ಕೆ ಹತ್ತಿರದ ರೈತ ಸ್ನೇಹಿ ಕೃಷಿ ಮಾದರಿಯಾಗಬೇಕಿದೆ. ಇದರಿಂದ, ನಿರಂತರ ಆದಾಯದೊಂದಿಗೆ ಪರಿಸರಕ್ಕೂ ಲಾಭವುಂಟು ಮಾಡುವಂತಿರಬೇಕು. ಹಣ್ಣಿನ ಮರಗಳಾದ ಮಾವು, ಹುಣಸೆ, ಹಲಸು, ಬೇಲ, ನೇರಳೆ ಮತ್ತು ವಿವಿಧ ಜಾತಿಯ ಬಹು ಉತ್ಪನ್ನಗಳನ್ನು ನೀಡುವಂತಹ ಮರಗಳಾಗಿದ್ದು, ಕೇವಲ ಪ್ರತಿ ವರ್ಷ ಉತ್ಪನ್ನಗಳನ್ನು ನೀಡುವುದಲ್ಲದೇ ಮೌಲ್ಯವರ್ಧನೆಗೆ ಯೋಗ್ಯವಾಗಿರಬೇಕು, ಇದು ಮಾರುಕಟ್ಟೆಯ ಏರಿಳಿತಗಳಿಂದ ರಕ್ಷಿಸುತ್ತದೆ.

ಆದಾಯಕ್ಕಿಂತಲೂ ಮಿಗಿಲಾಗಿ ಮರಗಳ ಹೊದಿಕೆಯು ಮಣ್ಣಿನ ಫಲವತ್ತತೆ ಹೆಚ್ಚಿಸಲಿದೆ, ಮಣ್ಣಿನ ಸವಕಳಿ ಕಡಿಮೆಗೊಳಿಸಲಿದೆ. ತೇವಾಂಶ ಹೆಚ್ಚಿಸುವುದರೊಂದಿಗೆ ಸ್ಥಳೀಯ ಹವಾಮಾನವನ್ನು ಸುಧಾರಿಸುವುದು ಮತ್ತು ಪರಾಗಸ್ಪರ್ಶ ನಿರ್ವಹಿಸುವ ಕೀಟಗಳ ಮತ್ತು ಜೀವ ವೈವಿಧ್ಯತೆಯ ರಕ್ಷಣೆಯೊಂದಿಗೆ ಭೂಮಿಯನ್ನು ಉತ್ಪಾದಕತೆಯ ನಿರಂತರತೆಯನ್ನು ಮುಂದಿನ ಜನಾಂಗಕ್ಕೂ ಮರ ಆಧಾರಿತ ಹಣ್ಣು ಮತ್ತು ಆಹಾರ ಅಭಿಯಾನಗಳನ್ನು ಮುಂದುವರಿಸಬೇಕಿದೆ. ಇದು ರೈತರ ಜಮೀನುಗಳನ್ನು ಹೆಚ್ಚು ಲಾಭದಾಯಕ ಮತ್ತು ಭೂಮಿಯ ಸ್ಥಿತಿಸ್ಥಾಪಕತ್ವದೊಂದಿಗೆ ರೈತರನ್ನು ಹಸಿರು ಆರ್ಥಿಕತೆಯ ಹರಿಕಾರರನ್ನಾಗಿ ರೂಪಿಸಲಿದೆ.

**ಮುಂದಿನ ದಿನಗಳಲ್ಲಿಯ ನೀತಿ ಹಾಗೂ ರೈತರು ಕೈಗೊಳ್ಳಬೇಕಾದ ಕ್ರಮಗಳು:**

ಕೃಷಿಅರಣ್ಯ ಮತ್ತು ಕಾರ್ಬನ್ ಕ್ರೆಡಿಟ್‌ನಿಂದ ರೈತರಿಗೆ ನೈಜವಾದ ಲಾಭವಾಗಲು, ನೀತಿಗಳು ಮತ್ತು ಕಾರ್ಯಕ್ರಮಗಳು ರೈತಸ್ನೇಹಿಯಾಗಿರಬೇಕು. ಪಾರದರ್ಶಕವಾಗಿದ್ದು ಸರಳವಾಗಿ ಅನುಸರಿಸುವಂತಿಬೇಕು. ರಾಜ್ಯ ಸರ್ಕಾರವು ಅಧಿಕಾರಿಶಾಹಿಯ ಹಿಡಿತವನ್ನು ಕಡಿಮೆಗೊಳಿಸಿ, ವಿಧಿ ವಿಧಾನಗಳನ್ನು ಸರಳೀಕರಣಗೊಳಿಸುವುದು ಮತ್ತು ಯೋಜನೆಗಳಿಂದಾಗುವ ಲಾಭಗಳನ್ನು ಸ್ಪಷ್ಟವಾಗಿ ತಿಳಿಸಬೇಕು. ಸಂಸ್ಥೆಗಳಾದ ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ (IAFT) ಮತ್ತು ಇತರೆ ಮಾಹಿತಿ ಒದಗಿಸುವ ಸಂಘ ಸಂಸ್ಥೆಗಳು ಸಮೂಚಿತ ಮಾರ್ಗದಲ್ಲಿ ತಾಂತ್ರಿಕ ತರಬೇತಿ, ಸಹಾಯ ಮತ್ತು ಬೆಳೆಸುವ ಮರಗಳ ಆಯ್ಕೆ ಹಾಗೂ ಮರಗಳನ್ನು ವಿಧಿ ವಿಧಾನಗಳನ್ನು ಕಾರ್ಬನ್ ಸ್ಥಿರೀಕರಿಸುವ ಕ್ರಮಗಳ ಬಗ್ಗೆ ಸೂಕ್ತ ತಿಳುವಳಿಕೆ ನೀಡಬೇಕು. ಅದೇ ಸಮಯದಲ್ಲಿ ರೈತರಿಗೆ ಸಮಯಕ್ಕನುಗುಣವಾಗಿ ಕಾರ್ಬನ್ ಕ್ರೆಡಿಟ್‌ಗಳನ್ನು ನಿರ್ವಹಿಸುವ ಕ್ರಮಗಳು ಮತ್ತು ವರ್ಗಾಯಿಸುವ ರೀತಿನೀತಿಗಳ ಬಗ್ಗೆ ಪಾರದರ್ಶಕತೆಯೊಂದಿಗೆ ಸ್ಪಷ್ಟತೆ ಇರಬೇಕು.

ಕರ್ನಾಟಕದಲ್ಲಿರುವ ವಿವಿಧ ಕೃಷಿ ವಲಯಗಳಲ್ಲಿಯ ಯಶಸ್ವಿ ರೈತರ ಅನುಭವಗಳನ್ನು ಹಂಚಿಕೊಳ್ಳಲು ಕಾರ್ಯಾಗಾರಗಳನ್ನು ಆಗಿಂದಾಗ್ಗೆ ನಡೆಸುವುದರಿಂದ ಇತರೆ ರೈತರುಗಳಿಗೆ ವಿಶ್ವಾಸ ತುಂಬಲು ಸಾಧ್ಯವಾಗುತ್ತದೆ. ಹೊಸದಾಗಿ ಕರ್ನಾಟಕ ಸರ್ಕಾರದಿಂದ ಬಿಡುಗಡೆಯಾಗಿರುವ ಕೃಷಿಅರಣ್ಯದ ಕ್ರಿಯಾಯೋಜನೆಯು ಕೇಂದ್ರದ PM-RKVY ಯೋಜನೆಯಂತಿದ್ದು, ರಾಜ್ಯವು ಸಹ ಕಾರ್ಬನ್ ಕ್ರೆಡಿಟ್‌ಗಳ ಉತ್ಪಾದನೆಯ ನಿಟ್ಟಿನಲ್ಲಿ ಬದ್ಧತೆ ತೋರಿಸಬೇಕಿದೆ. ಇಲ್ಲಿ ಬೇಕಾಗಿರುವುದು ಶಕ್ತಿಯುತ ರೈತರ–'ನೀತಿ'–ಮಾರುಕಟ್ಟೆ ನಡುವೆ ಬಲವಾದ ಕೊಂಡಿಯನ್ನು ನಿರ್ಮಿಸಬೇಕಿದ್ದು, ಕೃಷಿಅರಣ್ಯಗಳು ರೈತರ ಮುಂದಿನ ಭವಿಷ್ಯದ ದಾರಿಯನ್ನು ಆದಾಯ ಮತ್ತು ಪರಿಸರ ಭದ್ರತೆಯನ್ನು ಒದಗಿಸುವಂತಿರಬೇಕು.

**ಭವಿಷ್ಯದ ದಾರಿಯನ್ನು ಎಚ್ಚರಿಕೆಯಿಂದ ಕ್ರಮಿಸಬೇಕಿದೆ:**

ಭಾರತದಲ್ಲಿ ಅದರಲ್ಲೂ ವಿಶೇಷವಾಗಿ ಕರ್ನಾಟಕವು ಈಗ ಕೃಷಿವನದ ಹೊಸ ಯುಗಕ್ಕೆ ಹೆಜ್ಜೆಯಿಡುತ್ತಿದೆ. ರಾಜ್ಯದ ಅರಣ್ಯ, ವನ್ಯಜೀವಿ ಮತ್ತು ಹವಾಮಾನ ಬದಲಾವಣೆ ನಿಯಂತ್ರಣ ಫೌಂಡೇಶನ್, PM-RKVYನ ಕೃಷಿವನ ಕಾರ್ಯಯೋಜನೆ ಮತ್ತು ಆಹಾರ ಆಧಾರಿತ ಪೈಲೆಟ್ ಯೋಜನೆಗಳು ರೈತರಿಗೆ ಆದಾಯ ಮತ್ತು ಪರಿಸರದ ಸ್ಥಿತಿ ಸ್ಥಾಪಕತ್ವ ಹೆಚ್ಚಿಸಲು ಬಲವಾದ ದಾರಿ ತೋರಿಸಿದೆ. ಭಾರತದ ದೇಶೀಯ ಕಾರ್ಬನ್ ಮಾರುಕಟ್ಟೆಯು ಮುಂಚೂಣಿಯಲ್ಲಿರುವುದರಿಂದ, ರೈತರಿಗೆ ಹವಾಮಾನ ನಿಯಂತ್ರಣ ಕ್ರಮಗಳಲ್ಲಿ ಪಾಲುದಾರರಾಗಲು ಹೊಸ ದಾರಿಗಳು ಸೃಷ್ಟಿಯಾಗಿದೆ.

ರಾಜ್ಯದಲ್ಲಿ ಕೃಷಿಅರಣ್ಯಗಳನ್ನು ಹೆಚ್ಚಿಸಲಿರುವ ಯಶಸ್ಸು ನಿಜವಾಗಲು ರೈತರ ಜಮೀನುಗಳಲ್ಲಿ ತರುವ ಲಾಭದ ಮೇಲೆ ಅವಲಂಭಿತವಾಗಿದೆ. ಇದಕ್ಕೆ ಪೂರಕವಾಗಿ ಪಾರದರ್ಶಕ ವ್ಯವಸ್ಥೆಗಳು, ಸಮಯಕ್ಕನುಗುಣವಾದ ಸಹಾಯ ಮತ್ತು ನಿಗಧಿತ ಪಾವತಿ ನಿಯಮಗಳಿರಬೇಕು. ಜೊತೆಗೆ ಸಮುದಾಯ–ನಿರ್ಧರಿತ ಮೇಲ್ವಿಚಾರಣೆ ಅತ್ಯಗತ್ಯ. ಇವುಗಳನ್ನು ಎಚ್ಚರಿಕೆಯಿಂದ ಅನುಷ್ಠಾನ ಮಾಡಿದರೆ, ಕಾರ್ಬನ್ ಕ್ರೆಡಿಟ್‌ಗಳೊಂದಿಗೆ ಕೃಷಿವನವು ಕರ್ನಾಟಕ ರೈತರ ಜೀವನೋಪಾಯವನ್ನು ಬಲಪಡಿಸಲು ಭೂದೃಶ್ಯಗಳನ್ನು ಪುನಶ್ಚೇತನಗೊಳಿಸಲು ಮತ್ತು ರಾಜ್ಯವನ್ನು ಹಸಿರು ಆರ್ಥಿಕತೆಯ ಮುಂಚೂಣಿ ರಾಜ್ಯವಾಗಿಸಲು ಸಾಧ್ಯ.

*ಲೇಖಕರ ಸಂಪರ್ಕಕ್ಕಾಗಿ:*
**ಮೊ: 7319132666**
c.biradar@gmail.com
**ಮೊ: 9448126246**
shivanandamurthyifs@gmail.com

# ಮಂಡ್ಯದ ಮಣ್ಣಿನಲ್ಲಿ ಕಾಫಿಯೊಂದಿಗೆ ಕೃಷಿಅರಣ್ಯದ ಕಂಪು



**ಚಿನ್ನಸ್ವಾಮಿ ವಡ್ಡಗೆರೆ,** ಬಂಗಾರದ ಮನುಷ್ಯರು–ಬೆಳಕಿನ ಬೇಸಾಯದ ಕಥಾನಕ (ಪುಸ್ತಕ)

ಸದಾ ಕಬ್ಬು, ಭತ್ತ ಬೆಳೆಯುವ ಸಕ್ಕರೆ ನಾಡು ಮಂಡ್ಯದಲ್ಲಿ ಸದ್ದಿಲ್ಲದೆ ನಡೆಯುತ್ತಿರುವ ಕಾಫಿ ಕೃಷಿಯ ಬಗ್ಗೆ ನಾವು ಮೊದಲು ಕೇಳಿದಾಗ ಅಚ್ಚರಿಪಟ್ಟೆವು. ಆದರೆ ಅಲ್ಲಿ ಹೋಗಿ ನೋಡಿದಾಗ ಅಪ್ಪ ಮಕ್ಕಳಿಬ್ಬರು ಸೇರಿ ರೂಪಿಸಿರುವ ನಾಲ್ಕು ಎಕರೆ ಕಾಫಿಯ ತೋಟದ ಕಂಪು ಬೀರಿತ್ತು. ಹಚ್ಚ ಹಸಿರಿನಿಂದ ಅರಳಿ ನಿಂತ ಕಾಫಿ ತೋಟದಲ್ಲಿ ಗಿಡಗಳ ತುಂಬಾ ಹಣ್ಣುಗಳು, ನಡುವೆ ಹಲವಾರು ಬಗೆಯ ಸಾಂಬಾರ, ವಾಣಿಜ್ಯ, ಆಯುರ್ವೇದ, ಆಹಾರ, ಹಣ್ಣು ಹೀಗೆ ನಾನಾ ಬಗೆಯ ಗಿಡ / ಮರಗಳು ನಮ್ಮನ್ನು ಬೆರಗಾಗುವಂತೆ ಮಾಡಿದವು.

ಸಾಂಪ್ರದಾಯಿಕ ಪದ್ಧತಿಯನ್ನು ಬಿಟ್ಟು ಹೊಸ ಬಗೆಯ ಆಲೋಚನೆಗಳನ್ನು ರೂಢಿಸಿಕೊಂಡು ತೋಟಗಾರಿಕೆ, ಕೃಷಿಅರಣ್ಯ, ಹೈನುಗಾರಿಕೆ ಹೀಗೆ ವಿವಿಧ ಇಲಾಖೆಯ ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕ ಇಟ್ಟುಕೊಂಡ ರೈತ ಶ್ರೀ ಅನಿಲ್ ಕುಮಾರ್, ಒಬ್ಬ ಸಾವಯವ ಕೃಷಿಕ ಕಟ್ಟಿದ ತೋಟದ ಚಿತ್ರಣ.

**ಪಾಲಹಳ್ಳಿಯಲ್ಲಿ ಸಾವಯವ ಕ್ರಾಂತಿ**

ಅಚ್ಚ ಹಸಿರಿನಿಂದ ಕಂಗೊಳಿಸುವ ತೋಟದಲ್ಲಿ ನಿಂತು ನೋಡಿದರೆ ಪೂರ್ವಕ್ಕೆ ಶ್ರೀರಂಗಪಟ್ಟಣ, ಪಶ್ಚಿಮಕ್ಕೆ ಕೃಷ್ಣರಾಜ ಸಾಗರ, ಉತ್ತರಕ್ಕೆ ರಂಗನತಿಟ್ಟು ದಕ್ಷಿಣಕ್ಕೆ ಮೈಸೂರು ನಡುವೆ ಇರುವುದೆ ಪಾಲಹಳ್ಳಿ. ಇಂತಹ ಪುಟ್ಟ ಗ್ರಾಮ ಪಾಲಹಳ್ಳಿಯ ಶ್ರೀನಿವಾಸ್ ಮತ್ತು ಅವರ ಮಗ ಅನಿಲ್‌ಕುಮಾರ್ ಸೇರಿ ರೂಪಿಸಿರುವ ನೈಸರ್ಗಿಕ ಸಮ್ಮಿಶ್ರ ಬೆಳೆಯ ತೋಟ ಯುವ ಕೃಷಿಕರಿಗೆ ಮಾದರಿಯಾಗಿದೆ.

ಸಮಗ್ರ ಕೃಷಿ ಕ್ಷೇತ್ರದಲ್ಲಿ ಹತ್ತು ಹಲವು ಬೆಳೆಗಳನ್ನು ಮಿಶ್ರ ಬೇಸಾಯ ಪದ್ಧತಿಯಲ್ಲಿ ಬೆಳೆಯಲಾಗಿದ್ದು, ಅವು ಈಗ ನಿರಂತರ ಆದಾಯ ತಂದುಕೊಡುವ ಮೂಲಗಳಾಗಿ ಪರಿವರ್ತನೆಗೊಂಡಿವೆ.

ಕೃಷಿ ಕ್ಷೇತ್ರದಲಿ ಮಾಡಿದ ಸಾಧನೆಯನ್ನು ಗಮನಿಸಿ ರಾಜ್ಯ ಸರಕಾರ ಶ್ರೀನಿವಾಸ್ ಅವರಿಗೆ 2010–11ನೇ ಸಾಲಿನಲ್ಲಿ 'ಕೃಷಿ ಪಂಡಿತ' ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಇದೆಲ್ಲದರ ಹಿಂದೆ ಅಪಾರ ಶ್ರಮ, ನೋವು, ಅಪಮಾನಗಳ ಸರಮಾಲೆಯೆ ಇದೆ. ಜೀವನದಲ್ಲಿ ಎದುರಾದ ಸಂಕಷ್ಟಗಳಿಗೆ ತಲೆಬಾಗದೆ ಇವರು ಮಾಡಿದ ಸಾಧನೆ ಸೋಮಾರಿಗಳನ್ನು ನಾಚಿಸುವಂತಿದೆ. ಕೃಷಿ ಎಂದರೆ ನಷ್ಟ ಎನ್ನುವವರಿಗೆ ಖಂಡಿತಾ ಇಲ್ಲ ಲಾಭದಾಯಕ, ಇಲ್ಲಿ ನೋಡಿ ಉತ್ತರ ಎಂಬಂತಿದೆ.

ಬಯೋ ಡೈಜಸ್ಟರ್, ಜೀವಾಮೃತ ಘಟಕ, ಬೀಜಾಮೃತ ಘಟಕ ಹಾಗೂ ಜೈವಿಕ ಅನಿಲ ಘಟಕಗಳನ್ನು ತುಂಬಾ ವ್ಯವಸ್ಥಿತವಾಗಿ ನಿರ್ಮಾಣ ಮಾಡಿಕೊಂಡು, ಕೊಟ್ಟಿಗೆ ಗೊಬ್ಬರ, ಮಾನವನ ಮಲದಿಂದಾದ ಕಾಂಪೋಸ್ಟ್ ಗೊಬ್ಬರವನ್ನು ಸಮರ್ಪಕ ರೀತಿಯಲ್ಲಿ ಬಳಸಿಕೊಂಡು ಇವರು ಮಾಡಿರುವ ಸಾವಯವ ಕೃಷಿ ಐದಾರು ಕುಟುಂಬಗಳು ನೆಮ್ಮದಿಯ ಜೀವನ ಕಂಡುಕೊಳ್ಳಲು ಸಹಕಾರಿಯಾಗಿದೆ. ನಾಲ್ಕು ಎಕರೆ ಪ್ರದೇಶದ ಸುತ್ತಲೂ ಸಿಲ್ವರ್, ಹೆಬ್ಬೇವು, ಗ್ಲಿರಿಸೀಡಿಯಾ ಮತ್ತಿತರ ಕಾಡು ಜಾತಿಯ ಮರಗಳನ್ನು ಬೆಳೆಯಲಾಗಿದೆ. ಇವು ತಡೆಗೋಡೆಗಳಾಗಿ ಕೆಲಸ ಮಾಡುವುದರ ಜೊತೆಗೆ ಹಸಿರೆಲೆ ಗೊಬ್ಬರವಾಗಿರೂ ಉಪಯೋಗಕ್ಕೆ ಬರುತ್ತಿವೆ. 90 ತೆಂಗಿನ ಮರಗಳಿದ್ದು ವಾರ್ಷಿಕ 10 ರಿಂದ 12 ಸಾವಿರ ಕಾಯಿಗಳೂ ಸಿಗುತ್ತವೆ. ಸಾವಿರ ಅಡಿಕೆ ಮರಗಳಿದ್ದು ನಡುವೆ ಮೂರು ಸಾವಿರ ರೋಬಸ್ಟಾ ಮತ್ತು ಅರೇಬಿಕಾ ತಳಿಯ ಕಾಫಿ ಗಿಡಗಳಿವೆ. ಅಲ್ಲಲ್ಲಿ ನೂರಾರು ಜಾತಿಯ ಔಷಧೀಯ ಸಸ್ಯಗಳು, ಹಣ್ಣು, ಸಾಂಬಾರ ಬೆಳೆಗಳ ವಿವಿಧ ತಳಿಯ ನೂರಾರು ಗಿಡಮರಗಳಿವೆ. ಒಟ್ಟಾರೆ ಇಡೀ ತೋಟ ಕಾಡು ಕೃಷಿ ಮಾದರಿಯಲ್ಲಿ ಅಚ್ಚ ಹಸಿರಿನಿಂದ ಕಂಗೊಳಿಸುತ್ತಿದೆ. ಎಲ್ಲೇ ಮಣ್ಣು ಹಿಡಿದು ನೋಡಿದರು ಎರೆಹುಳುಗಳು ಸದಾ ತೋಟದಲ್ಲಿ ಕೆಲಸ ಮಾಡುತ್ತಿರುವ ಸೈನಿಕರಂತೆ ಕಾಣುತ್ತವೆ. ಇವರು ಬೆಳೆಸಿರುವ ಗಿಡ ಮರಗಳು ಕೃಷಿಅರಣ್ಯದ ಮಾದರಿಗೆ ಸಾಕ್ಷಿಯಾಗಿದ್ದು, ಹವಾಮಾನ ಬದಲಾವಣೆ ನಿಭಾಯಿಸಲು ಹಾಗೂ ರೈತರ ಆದಾಯ ಹೆಚ್ಚಿಸಲಿವೆ.



**ಸಂಜೀವಿನಿಯಾದ ರೈತ ಸಂಪರ್ಕ ಕೇಂದ್ರ**

ಬೆಳಗೊಳದ ರೈತ ಸಂಪರ್ಕ ಕೇಂದ್ರದ ಸಹಾಯಕ ಕೃಷಿ ಅಧಿಕಾರಿಯನ್ನು ಭೇಟಿ ಮಾಡಿ ಶ್ರೀನಿವಾಸ್ ಪಾಲಹಳ್ಳಿಯಲ್ಲಿ ತಮಗೆ ನಾಲ್ಕು ಎಕರೆ ಜಮೀನು ಇದ್ದು, ತಮಗೆ ಸೂಕ್ತ ಸಲಹೆ ಮತ್ತು ಮಾರ್ಗದರ್ಶನ ಮಾಡುವಂತೆ ಕೇಳಿಕೊಂಡರು. ಅಂದು ಅವರು ಹೇಳಿದ ನೀತಿ ಪಾಠ ಶ್ರೀನಿವಾಸ್ ಅವರ ಕಣ್ಣು ತೆರೆಸಿತು.

ನಿಮಗೆ ಭೂಮಿ ಇದೆ, ಬುದ್ಧಿ ಇದೆ. ನೀವು ಓದದಿದ್ದರೆ ನಷ್ಟವೇನೂ ಆಗಿಲ್ಲ. ನೀವ್ಯಾಕೆ ಬೇರೆ ಕಡೆ ಕೂಲಿಗೆ ಹೋಗಬೇಕು. ಭೂಮಿಯೇ ಪಾಠ ಶಾಲೆ. ನೇಗಿಲು, ಗುದ್ದಲಿ, ಪಿಕಾಸಿಯೇ ಲೇಖನಿ. ಬೆವರೇ ಶಾಯಿ. ನನ್ನ ತಿಳುವಳಿಕೆ ಮತ್ತು ನಿಮ್ಮ ಶ್ರಮ ಎರಡೂ ಸೇರಿದರೆ ಹತ್ತಾರು ಮಂದಿ ಗುರುತಿಸುವ ಗಣ್ಯ ವ್ಯಕ್ತಿ ನೀವಾಗುತ್ತೀರಿ ಎಂದು ಅಧಿಕಾರಿಗಳು ಹೇಳಿದರು.

ಹಾಗಾದರೆ ಒಂದು ಕೈ ನೋಡಿಯೇ ಬಿಡುವ ಎಂದು ನಿರ್ಧರಿಸಿದರು. ಕೃಷಿಅರಣ್ಯ, ತೋಟಗಾರಿಕೆ, ಹೈನುಗಾರಿಕೆ ಇಲಾಖೆ ಜೊತೆಗೆ ನಿಕಟ ಸಂಪರ್ಕ ಇಟ್ಟುಕೊಂಡು ಸಮಗ್ರ ಬೇಸಾಯ ಪದ್ಧತಿ ಅಳವಡಿಸಿಕೊಂಡರು. ಎರೆಹುಳು ರೈತನ ಮಿತ್ರನಾದರೆ, ಎತ್ತುಗಳು ತೋಟದ ಸೈನಿಕ ಎನ್ನುವುದನ್ನು ಅನುಭವದಿಂದ ಕಂಡುಕೊಂಡರು ಹಾಗೂ ಗಿಡಮರಗಳು ಸಾವಯವ ಮಿತ್ರ ಎಂದು ಅರಿತರು.

ಆಡು, ಕುರಿ, ಮುರ್ರಾ ತಳಿಯ ಎಮ್ಮೆಗಳನ್ನು ಸಾಕಿದ್ದು, ಅವರ ಹೊಲಕ್ಕೆ ಗೊಬ್ಬರವು ಆಯ್ತು ಜೀವನ ನಿರ್ವಹಣೆಗೆ ದಾರಿಯೂ



ಆಯ್ತು. ಅಲ್ಲಿಂದ ಮತ್ತೆ ನಾನು ತಿರುಗಿ ನೋಡಲೇ ಇಲ್ಲ. ಮಗ ಬಿಕಾಂ ಪದವಿ ಪಡೆದು ಆದರ್ಶ ಕೃಷಿಕನಾಗಿದ್ದಾನೆ. ಮಗಳು ಅರುಣ್ ಕುಮಾರಿ ಮಾನಸ ಗಂಗ್ರೋತ್ರಿಯಲ್ಲಿ ಆಂಗ್ಲ ಭಾಷೆಯಲ್ಲಿ ಎಂ.ಎ. ಮುಗಿಸಿ ಮೈಸೂರಿನ ಕಾಲೇಜಿನಲ್ಲಿ ಆಂಗ್ಲ ಉಪನ್ಯಾಸಕಿಯಾಗಿದ್ದಾಳೆ ಎಂದು ತಮ್ಮ ಯಶಸ್ಸಿನ ಕತೆಯನ್ನು ಶ್ರೀನಿವಾಸ್ ಬಿಚ್ಚಿಟ್ಟರು. ತೋಟದ ಸುತ್ತಾ ಹಾಕಿದ್ದ ಸಿಲ್ವರ್ ಸಸಿಗಳು 15 ವರ್ಷದ ನಂತರ ನಾಲ್ಕುವರೆ ಲಕ್ಷ ರೂಪಾಯಿ ಆದಾಯ ತಂದುಕೊಟ್ಟಿವೆ. ಯಾವ ಕಂಪನಿಯ ವಿಮೆ ಮಾಡಿಸಿದರೆ ತಾನೇ ಇಷ್ಟೊಂದು ಆದಾಯ ಬರುತ್ತೆ ಹೇಳಿ ಎಂದಾಗ ಅವರ ಮುಖದಲ್ಲಿ ನಗು ಅರಳಿತು. ಬೇಸಾಯ ನೀ ಸಾಯ ನಿಮ್ಮಪ್ಪ ಸಾಯ ಎನ್ನುವ ಈ ದಿನಗಳಲ್ಲಿ ಅವರ ನಗು ನಮ್ಮನ್ನು ಒಂದು ಕ್ಷಣ ಯೋಚಿಸುವಂತೆ ಮಾಡಿತು. ಕೃಷಿಅರಣ್ಯಗಳು ರೈತನಿಗೆ ಜೀವ ವಿಮೆಯಂತೆ ಕಷ್ಟದ ಸಮಯದಲ್ಲಿ ಆರ್ಥಿಕವಾಗಿ ಮುನ್ನಡೆಸಿ, ರೈತ ಸ್ನೇಹಿಯಾಗಿ ಹಾಗೂ ಪರಿಸರ ಸ್ನೇಹಿಯಾಗಿ ನಿಂತಿವೆ.

**ಬೇಸಾಯದಿಂದ ನೆಮ್ಮದಿ, ಆರೋಗ್ಯ ಕಂಡುಕೊಂಡೆವು...**

ಹಣ ಗಳಿಸಬೇಕು ಎನ್ನುವವರು ರಿಯಲ್ ಎಸ್ಟೇಟ್ ಮಾಡಲಿ, ವ್ಯಾಪಾರ ಮಾಡಲಿ. ನೆಮ್ಮದಿ, ಆರೋಗ್ಯ ಬೇಕು ಎನ್ನುವವರು ಕೃಷಿ ಕ್ಷೇತ್ರಕ್ಕೆ ಬರಲಿ ಎಂದವರು ಪಾಲಹಳ್ಳಿಯ ಶ್ರೀನಿವಾಸ್ ಅವರ ಮಗ ಅನಿಲ್ ಕುಮಾರ್.

ಇವರು ಮೈಸೂರಿನ ಡಿ. ಬನುಮಯ್ಯ ಸಂಜೆ ಕಾಲೇಜಿನಲ್ಲಿ 2006 ರಲ್ಲಿ ಬಿ.ಕಾಂ. ಪದವಿ ಮುಗಿಸಿ, ಫಾಲ್ಕನ್ ಟೈರ್ ಕಾರ್ಖಾನೆಯಲ್ಲಿ ಬದಲಿ ನೌಕರನಾಗಿ, ಪ್ರತಿಷ್ಠಿತ ಇನ್‌ಫೋಸಿಸ್ ಕಂಪನಿಯಲ್ಲಿ ನೌಕರಿ ಮಾಡಿದ್ದಾರೆ. ಕೊನೆಗೆ ಕೆಲಸದ ಒತ್ತಡ ಮತ್ತು ನಗರ ಬದುಕು ಬೇಡವೆನಿಸಿ ಮರಳೀ ಪಾಲಹಳ್ಳಿಯಲ್ಲಿ ತಂದೆಯ ಜೊತೆ ಕೃಷಿ ಮಾಡುತ್ತಿದ್ದಾರೆ.

ತೋಟಗಾರಿಕೆ ಬೆಳೆಗಳನ್ನು ಬೆಳೆಯುವುದರಿಂದ ಲಾಭ ಇದೆ. ಇವು ಆರಂಭದಲ್ಲಿ ತುಸು ಹೆಚ್ಚಿನ ಬಂಡವಾಳ ಬೇಡುತ್ತವೆ. ಗಿಡದ ಬೇರುಗಳು ಆಳದವರೆಗೆ ಹೋಗುವುದರಿಂದ ಇವುಗಳ ಆಯಸ್ಸು ಹೆಚ್ಚು, ಆದಾಯವು ಹೆಚ್ಚು. ಆದ್ದರಿಂದ ನಮ್ಮ ರೈತರು ತೋಟಗಾರಿಕಾ ಬೆಳೆಗಳಿಗೆ ಪ್ರಾಧಾನ್ಯತೆ ನೀಡಿದರೆ ಒಳ್ಳೆಯದು. ಗಂಗಾಮಾತೆ ಎಲ್ಲರಿಗೂ ಸಿಗುವುದಿಲ್ಲ ನಮಗೆ ಸಿಕ್ಕಿದ್ದಾಳೆ. ಹಾಗಂತ ನಾವು ನೀರನ್ನು ದುರ್ಬಳಕೆ ಮಾಡಿಲ್ಲ ಹನಿ ನೀರಾವರಿ ಮತ್ತು ಸ್ಪಿಂಕ್ಲರ್ ಪದ್ಧತಿ ಅಳವಡಿಸಿಕೊಳ್ಳುವ ಮೂಲಕ ನೀರಿನಲ್ಲೂ ಮಿತವ್ಯಯ ಕಾಪಾಡಿಕೊಂಡಿದ್ದೇವೆ.

ತರಕಾರಿ ಬೆಳೆಗಳು ಜೂಜು ಇದ್ದಂತೆ. ಒಮ್ಮೆ ನಾವು ಬೆಳೆದ ಬೆಳೆಗೆ ಉತ್ತಮ ಬೆಲೆ ಸಿಕ್ಕಿದರೆ ಮತ್ತೊಮ್ಮೆ ಬೆಲೆ ಕುಸಿಯುತ್ತದೆ. ಅಂತಹ ಸಂದರ್ಭದಲ್ಲಿ ರೈತರು ಅಪಾಯಕ್ಕೆ ಸಿಲುಕಿಕೊಳ್ಳುತ್ತಾರೆ. ಜೊತೆಗೆ ಔಷಧಿ ಕಳೆ ತೆಗೆಯುವುದು, ಗೊಬ್ಬರ ಎಲ್ಲ ಖರ್ಚು ಸೇರಿ ತರಕಾರಿ ಖರ್ಚು ಬೇಡುತ್ತದೆ. ಇದು ಕಂಡುಕೊಂಡ ಅನುಭವ ಎನ್ನಬಹುದು.

ನಾವು ದುಂದು ವೆಚ್ಚ ಮಾಡದೆ ಬೇಸಾಯ ಮಾಡುತ್ತಿದ್ದೇವೆ. ಮೈಸೂರು ತೋಟಗಾರಿಕೆ ವಿಶ್ವ ವಿದ್ಯಾನಿಲಯ ಪ್ರಾಧ್ಯಾಪಕರಾದ ಶ್ರೀ



ಬಿ.ಎಸ್. ಹರೀಶ್ ಅವರ ಸಲಹೆ ಮತ್ತು ಮಾರ್ಗದರ್ಶನ ನಮ್ಮ ಸಾಧನೆಗೆ ಸಹಕಾರಿಯಾಗಿದೆ. ಅವರ ಸಲಹೆಯಂತೆ ನಾನು ಕೆಲವು ಹಣ್ಣಿನ ಗಿಡಗಳ ನರ್ಸರಿಯನ್ನು ಆರಂಭಿಸಿದ್ದು ತೆಂಗು, ಬೆಣ್ಣೆ ಹಣ್ಣು (ಬಟರ್ ಫ್ರೂಟ್) ಮತ್ತಿತರ ಗಿಡಗಳು ನಮ್ಮಲ್ಲಿ ಮಾರಾಟಕ್ಕೆ ಲಭ್ಯ ಇವೆ. ಹೊಸ ಮಾದರಿಯಲ್ಲಿ ಏಲಕ್ಕಿ ಬಾಳೆ ಬೆಳೆದಿದ್ದೇನೆ. ನಾನಾ ತಳಿಯ ಬಾಳೆಯ ಗಿಡಗಳು ನಮ್ಮ ತೋಟದಲ್ಲಿ ಜಾಗ ಪಡೆದಿವೆ. ನಮ್ಮ ತೋಟಕ್ಕೆ ಮುಖ್ಯವಾಗಿ ಬಯೋಡೈಜಸ್ಟರ್‌ನಿಂದ ಬಂದ ದ್ರವ ರೂಪದ ರಸಸಾರ ಮತ್ತು ಕೊಟ್ಟಿಗೆ ಗೊಬ್ಬರವನ್ನು ಉಪಯೋಗಿಸುತ್ತೇವೆ. ಟ್ರೈಕೋಡರ್ಮಾ ಮತ್ತು ಶಿಲೀಂಧ್ರನಾಶಕ ಜೈವಿಕ ಗೊಬ್ಬರಗಳು ನಮ್ಮಲ್ಲಿ ಸದಾ ಇರುತ್ತವೆ. ಹಾಲಿಗೆ ಹೆಪ್ಪು ಹಾಕಿದಂತೆ ತೋಟಕ್ಕೆ ಜೀವಾಮೃತವನ್ನು ಬಳಸುತ್ತೇವೆ. ಒಟ್ಟಾರೆ ಕೃಷಿ ನಮಗೆ ಖುಷಿ ತಂದಿದೆ ಎನ್ನುತ್ತಾರೆ. ತೋಟದಲ್ಲಿ ಬೆಳೆಯಲಾಗಿರುವ ವಾಣಿಜ್ಯ, ಆಹಾರ, ದ್ವಿದಳ, ಏಕದಳ, ಸಾಂಬಾರ, ತೋಟಗಾರಿಕೆ ಹಾಗೂ ಅರಣ್ಯ ಮರದ ಬೆಳೆಗಳ ಬಗ್ಗೆ ಸಮಗ್ರ ಮಾಹಿತಿ ಇರುವ ದೊಡ್ಡ ಬೋರ್ಡ್ ಒಂದು ತೋಟಕ್ಕೆ ಹೋದವರ ಗಮನ ಸೆಳೆಯುತ್ತದೆ. ಆಸಕ್ತರು ಮಾಹಿತಿಗಾಗಿ 9945419236 ಮತ್ತು 8095777255 ಗಳನ್ನು ಸಂಪರ್ಕಿಸಬಹುದು.

ಬೇಸಾಯ ಕೆಟ್ಟರು ಆರು ತಿಂಗಳ ಅಂಬಲಿಗೆ ದೋಕವಿಲ್ಲವೆನ್ನುವಂತೆ, ಭೂಮಿಯೊಡನೆ ಮಾತನಾಡುವುದರೊಂದಿಗೆ ಕೃಷಿಯಲ್ಲಿ ರಸಖುಷಿಯಾದರೆ ದೀರ್ಘಾಯುಷ್ಯದೊಂದಿಗೆ ಸದಾ ನೆಮ್ಮದಿಯ ಬದುಕು ಸಾಗಿಸುವುದನ್ನು ಸಾಧಕರಾದ ಶ್ರೀ ಅರುಣ್ ಕುಮಾರ್ ರವರು ಸಾಧಿಸಿ ಮಾದರಿಯಾಗಿದ್ದಾರೆ.

**ಲೇಖಕರ ಸಂಪರ್ಕಕ್ಕಾಗಿ:**
**ಮೊ: 93804 77210**

# ಸೀತಾಫಲ (Custard Apple)



– ಹೆಚ್.ಜಿ. ಶಿವಾನಂದಮೂರ್ತಿ, ಭಾ.ಅ.ಸೇ (ನಿ)

**ಕನ್ನಡ ಭಾಷೆ:** ಸೀತಾಫಲ

**ಆಂಗ್ಲ ಭಾಷೆ:** Custard Apple

**ಸಸ್ಯಶಾಸ್ತ್ರೀಯ ಹೆಸರು:** ಅನೋನಾ ಸ್ಕಾಮೋಸಾ. ಲಿ. (Annona squamosal L.)

**ಕುಟುಂಬ:** ಅನೋನೇಶಿ

ಸೀತಾಫಲ ಅಥವಾ ಶ್ರೀ ಫಲವೆಂದು ಕನ್ನಡದಲ್ಲಿ ಹೆಸರಿಸಲಾದ ಮತ್ತು ಸಿಹಿಯುಳ್ಳ ಮತ್ತು ಮೃದುವಾದ ತಿರುಳನ್ನು ಹೊಂದಿರುವ ಹಣ್ಣೇ ಸೀತಾಫಲ. ಇದು ಅಪಾರ ಶಕ್ತಿ ಮತ್ತು ಕಬ್ಬಿಣದ ಅಂಶವನ್ನು ಯತೇಚ್ಚವಾಗಿ ಹೊಂದಿರುವ ಹಣ್ಣಾಗಿದೆ.

**ಬೀಜಗಳ ಸಂಗ್ರಹ:** ಬಲಿತ ಹಣ್ಣುಗಳಿಂದ ಬೀಜಗಳನ್ನು ಸಂಗ್ರಹಿಸಬೇಕು. ಹಣ್ಣುಗಳು ಅಕ್ಟೋಬರ್ ತಿಂಗಳಿನಲ್ಲಿ ಬಲಿಯುತ್ತವೆ. ಒಂದು ಕೆ.ಜಿ. ತೂಕದಲ್ಲಿ 4000 ಬೀಜಗಳಿರುತ್ತವೆ.

**ಬೀಜಗಳ ಸಂಸ್ಕರಣೆ ಮತ್ತು ಬೀಜೋಪಚಾರ:** ಈ ಹಣ್ಣಿನ ಗಿಡವನ್ನು ಸಾಮಾನ್ಯವಾಗಿ ಬೀಜದಿಂದಲೇ ಬೆಳೆಸಬಹುದು. 20–30 ದಿವಸಗಳಲ್ಲಿ ಮೊಳಕೆಯೊಡೆಯುತ್ತವೆ. ನಂತರ 6 ತಿಂಗಳಿನಲ್ಲಿ ನಾಟಿ ಮಾಡಲು ಸಿದ್ಧವಾಗುತ್ತವೆ. ಸಸ್ಯದ ಅಥವಾ ಸಸ್ಯ ಭಾಗಗಳಿಂದ ಬೆಳೆದಲ್ಲಿ ಒಂದೇ ತರಹದ ಗಿಡಗಳನ್ನು ಬೆಳೆಸಲು ಸಾಧ್ಯ. ಸಾಮಾನ್ಯವಾಗಿ ಬಡ್ಡಿಂಗ್ ವಿಧಾನವನ್ನು ಚೈತ್ರಮಾಸದಲ್ಲಿ ಅಥವಾ ಚಳಿಗಾಲದ ಅಂತ್ಯದಲ್ಲಿ ಬೆಳೆಸಲು ಪ್ರಯತ್ನಿಸುವುದು ಸೂಕ್ತ. ಒಂದು ವರ್ಷದ ರೂಟ್ ಸ್ಟಾಕ್ ಗಿಡಗಳಿಗೆ ಒಂದು ವರ್ಷ ಬೆಳೆದ ಸಯಾನ್ ಬಳಸಿ ಚೈತ್ರ ಮಾಸದಲ್ಲಿ ಸಹಜ ಕಸಿ ಮಾಡುವುದರಿಂದ ಬೆಳೆಸುವುದು ಸೂಕ್ತ.

**ನೆಡುತೋಪಿನ ನಿರ್ವಹಣೆ:** ಸಾಮಾನ್ಯವಾಗಿ ಬಿಸಿ ಹಾಗೂ ಹೆಚ್ಚು ತೇವಾಂಶವಿರುವ ವಾತಾವರಣ ಮತ್ತು ಕಡಿಮೆ ಚಳಿಯಿರುವ ಪ್ರದೇಶಗಳು ಈ ಗಿಡದ ಹೆಚ್ಚು ಬೆಳವಣಿಗೆಗೆ ಮತ್ತು ಉತ್ಪಾದನೆಗೆ ಸೂಕ್ತ. ಸೀತಾಫಲದ ಗಿಡಗಳು ಎಲ್ಲಾ ತರಹದ ಮಣ್ಣಿನಲ್ಲೂ ಬೆಳೆಯುತ್ತವೆ. ಕಡಿಮೆ ಆಳವಿರುವ, ಮರಳು ಮಣ್ಣಿನಲ್ಲಿಯೂ ಬೆಳೆಯುವುದು. ಆದರೆ ತಳಭಾಗದ ಮಣ್ಣು ಸರಿಯಾದ ರೀತಿಯಲ್ಲಿ ನೀರು ಬಸಿಯುವಂತಿರಬೇಕು. ನೀರು ಬಸಿಯುವ ಆಳದ ಕಪ್ಪು ಭೂಮಿಯಲ್ಲೂ ಚೆನ್ನಾಗಿ ಬೆಳೆಯುವುದು. ಕಡಿಮೆ ಪ್ರಮಾಣದ ಉಪ್ಪಿನಂಶ ಅಥವಾ ಆಮ್ಲೀಯ ಮಣ್ಣಿನ ಭೂಮಿಯಲ್ಲಿಯೂ ಬೆಳೆಯಬಹುದು. ಆದರೆ ಕ್ಲೋರಿನ್, ನೀರು ಬಸಿಯದ ಅಥವಾ ಜೌಗು ಪ್ರದೇಶಗಳು ಗಿಡದ ಬೆಳವಣಿಗೆಗೆ ಸಹಕರಿಸುವುದಿಲ್ಲ.

ಗಿಡಗಳನ್ನು ಮಳೆಗಾಲದಲ್ಲಿ ಮಳೆಯಾಶ್ರಿತ ಬೆಳೆಯಾಗಿ 60 X 60 X 60 ಸೆಂ.ಮೀನ ಗುಂಡಿಗಳಲ್ಲಿ 4 X 4 ಅಥವಾ 5 X 5 ಅಥವಾ 6 X 6 ಮೀ ಅಂತರದಲ್ಲಿ ಮಣ್ಣಿನ ವಿಧಕ್ಕೆ ತಕ್ಕಂತೆ ಮಳೆಗಾಲಕ್ಕೆ ಮುಂಚಿತವಾಗಿ ಗುಂಡಿ ತೆಗೆದು, ಆ ಗುಂಡಿಗಳಿಗೆ ಉತ್ತಮ ಗುಣಮಟ್ಟದ ಕೊಟ್ಟಿಗೆ ಗೊಬ್ಬರ, ಸಿಂಗಲ್ ಸೂಫರ್ ಪಾಸ್ಫೇಟ್ ಮತ್ತು ಬೇವು ಅಥವಾ ಹೊಂಗೆ ಹಿಂಡಿಯೊಂದಿಗೆ ಮುಚ್ಚಬೇಕು. ನೀರಾವರಿಯಿದ್ದಲ್ಲಿ 6 X 4 ಮೀ ಅಂತರದಲ್ಲಿ ಬೆಳೆಯುವುದರಿಂದ ಉತ್ತಮವಾದ ಬೆಳವಣಿಗೆ ಮತ್ತು ಹಣ್ಣು ಬಿಡುವುದನ್ನು ಕಾಣಬಹುದು. ಸೀತಾಫಲ ಗಿಡಗಳನ್ನು ದನಗಳಾಗಲಿ, ಕುರಿ/ಮೇಕೆಗಳಾಗಲಿ ತಿನ್ನುವುದಿಲ್ಲ.

ಸಸಿಗಳನ್ನು ನಾಟಿ ಮಾಡುವಾಗ 50 ಗ್ರಾಂ. ಪೋಟೋ ಬ್ಯಾಕ್ಟೀರಿಯಂ ಮತ್ತು 150 ಗ್ರಾಂ. ವೆಸಿಕ್ಯೂಲರ್ ಮೈಕೋರೈಜಾ ಸೂಕ್ಷ್ಮಾಣು ಜೀವಿಗಳ ಮಿಶ್ರಣವನ್ನು ಸಸಿಗಳ ಬೇರುಗಳಿಗೆ ಹಾಗೂ ನಾಟಿ ಮಾಡಿರುವ ಗಿಡಗಳಿಗೂ ಸಹ ನೀಡುವುದು ಸೂಕ್ತ.

ಬೇಸಿಗೆ ಸಮಯದಲ್ಲಿ ನಾಟಿ ಮಾಡಿರುವ ಸಸಿಗಳ ಮೇಲ್ಭಾಗದ ಮಣ್ಣಿಗೆ ಕೊಟ್ಟಿಗೆ ಗೊಬ್ಬರ ಹಾಕುವುದರಿಂದ ಬೇರುಗಳ ತ್ವರಿತ ಬೆಳವಣಿಗೆ ಮತ್ತು ಗಿಡಗಳು ಚೆನ್ನಾಗಿ ಬೆಳೆಯುತ್ತವೆ.

**ಮಾದರೀ ಅಂತರ:** 5 X 5 ಮೀ ಸೂಕ್ತವಾದದ್ದು.

**ಕೀಟಗಳು, ರೋಗಗಳು ಮತ್ತು ನಿರ್ವಹಣೆ:** ಕೀಟಗಳಾದ ಮೀಲೀ ಬಗ್ಸ್ – ಇವುಗಳು ಹಣ್ಣುಗಳ ಮೇಲೆ ಕಲೆಯನ್ನುಂಟು ಮಾಡಲಿವೆ. ಇದಕ್ಕೆ 0.05% ಡೈಕ್ಲೋರವಾಸ್ ದ್ರಾವಣವನ್ನು ಸಿಂಪರಿಸಬೇಕು.

**ರೋಗಗಳು:** ಎಲೆಗಳ ಮೇಲಿನ ಚುಕ್ಕೆಯು ಎಲೆಗಳು ವೇಗವಾಗಿ ಉದುರಲು ಕಾರಣವಾಗಲಿದೆ. ಇದನ್ನು 15 ದಿವಸಗಳಿಗೊಮ್ಮೆ 0.05% ಕಾರ್ಬನ್ ಡೈ ಜೀನ್ ದ್ರಾವಣವನ್ನು ರೋಗ ಲಕ್ಷಣ ಕಂಡ ಸಮಯದಿಂದ ಸಿಂಪರಿಸಬೇಕು.

ಆತ್ರಾಂಕ್‌ನೋಸ್ ರೋಗವು ಹೂ ಬಿಡುವ ಸಮಯದಲ್ಲಿ ಪ್ರಾರಂಭವಾಗಿ ಹಣ್ಣುಗಳು ಕೊನೆಯಾಗುವವರೆಗೂ ಇದ್ದು ಪೂರ್ಣವಾಗಿ ಹಣ್ಣುಗಳನ್ನು ಒಣಗಿಸುತ್ತದೆ. ಒಣಗಿದ ಹಣ್ಣುಗಳು ಗಿಡಗಳಲ್ಲಿ ನೇತಾಡಬಹುದು ಹಾಗೂ ಬೀಳಲೂಬಹುದು, ಇದರಿಂದ ಇಳುವರಿ ಕಡಿಮೆಯಾಗಲಿದೆ.

**ಆರ್ಥಿಕ ಕಟಾವು:** 12–15 ವರ್ಷಗಳು.

**ಇಳುವರಿ:** ಸರಾಸರಿ 7 ಟನ್‌ಗಳನ್ನು ಪ್ರತೀ ಹೆಕ್ಟೇರ್ ಪ್ರದೇಶದಿಂದ ಪಡೆಯಬಹುದು. ಹೆಚ್ಚು ದಟ್ಟವಾಗಿ ಬೆಳೆದ ನೆಡುತೋಪುಗಳಿಂದ 25 ಟನ್‌ವರೆಗೂ ಪಡೆಯಲು ಸಾಧ್ಯ.

**ಉಪಯೋಗಗಳು:** ಹಣ್ಣುಗಳು ತಿನ್ನಲು ರುಚಿಕರವಾಗಿರುತ್ತವೆ. ಗಿಡಗಳನ್ನು ಔಷಧಿಯಾಗಿ ಬಳಸಬಹುದು. ಸಿಹಿಯಾದ ಮತ್ತು ಬಲಿತ ಹಣ್ಣುಗಳನ್ನು 'ಡೆಸರ್ಟ್' ಫ್ರೂಟ್ ಎನ್ನುವರು. ಇವುಗಳನ್ನು ಷರಬತ್ತು, ಐಸ್‌ಕ್ರೀಮ್, ಜೆಲ್ಲಿ ತಯಾರಿಕೆಯಲ್ಲಿ ಬಳಸಲಾಗುವುದು.

**ಕೊಯ್ಲು:** ಬಲಿತ ಹಣ್ಣುಗಳನ್ನು ಸರಿಯಾದ ಸಮಯದಲ್ಲಿ ಕೊಯ್ಲು ಮಾಡವರು. ತಿಳಿ ಹಸಿರು ಬಣ್ಣದ, ತೊಳೆಗಳ ಮಧ್ಯೆ ಹಳದೀ ಬಣ್ಣವಿದ್ದು, ಹಣ್ಣುಗಳು ಬಿರುಕು ಬಿಡಲು ಪ್ರಾರಂಭಿಸಿದಾಗ, ಹಣ್ಣುಗಳು ಕೊಯ್ಲಿಗೆ ತಯಾರಿರುವುದಾಗಿ ತಿಳಿಯಬಹುದು. ಕೈಯಿಂದ ಹಣ್ಣುಗಳನ್ನು ತೆಗೆಯಲಾಗುವುದು. ಅಕ್ಟೋಬರ್–ನವೆಂಬರ್ ತಿಂಗಳಿನಲ್ಲಿ ಹೆಚ್ಚಿಗೆ ಹಣ್ಣುಗಳು ದೊರೆಯುತ್ತವೆ. 4 ರಿಂದ 5 ವರ್ಷಗಳ ಗಿಡಗಳಿಂದ 80–100 ಹಣ್ಣುಗಳನ್ನು ಪಡೆಯಬಹುದು. ಗಿಡಗಳಿಂದ ಕತ್ತರಿಸಿದ ಒಂದೇ ದಿನದಲ್ಲಿ ಹಣ್ಣಾಗುತ್ತವೆ. ಬಲಿತ ಹಣ್ಣುಗಳ್ನು 15–20$^0$ ಸೆಂಟಿಗ್ರೇಡ್ ಉಷ್ಣತೆ ಹಾಗೂ 85–90% ತೇವಾಂಶದ ಗಾಳಿಯಲ್ಲಿ, ಕಡಿಮೆ ಆಮ್ಲಜನಕ ಮತ್ತು ಎತಲೀನ್ ಹಾಗೂ ಶೇ.10ರ ಕಾರ್ಬನ್ ಡೈ ಆಕ್ಸೈಡ್ ಇರುವ ಗಾಳಿಯಲ್ಲಿ, ಹಣ್ಣುಗಳನ್ನು 12 ರಿಂದ 18 ದಿವಸ ಶೇಖರಿಸಿಡಬಹುದು.

**ಆರ್ಥಿಕ ಆದಾಯ:** ಪ್ರತಿ ಎಕರೆಗೆ 12 ಟನ್ ಹಣ್ಣುಗಳಿದ್ದಲ್ಲಿ ರೂ. 1.5 ರಿಂದ 3.5 ಲಕ್ಷ ಆದಾಯ ಪಡೆಯಬಹುದು.

**ಮಾರುಕಟ್ಟೆ ದರ:** ಮಾರುಕಟ್ಟೆಯ ದರವು ಸರಾಸರಿ ರೂ.35/ ಪ್ರತಿ ಕೆ.ಜಿ.ಗೆ ದೊರೆಯುವುದು ಹಾಗೂ ಇದರ ದರವು ಪೂರೈಕೆ ಮತ್ತು ಬೇಡಿಕೆಯನ್ನು ಅವಲಂಬಿಸಿರುತ್ತದೆ. ಸೀತಾಫಲ ಗಿಡಗಳನ್ನು ದನಗಳಾಗಿ, ಮೇಕೆಗಳಾಗಲಿ ತಿನ್ನುವುದಿಲ್ಲ. ಆದ್ದರಿಂದ ಈ ಗಿಡಕ್ಕೆ ಯಾವುದೇ ರಕ್ಷಣೆಯ ಅವಶ್ಯಕತೆ ಇರುವುದಿಲ್ಲ.

ಲೇಖಕರ ಸಂಪರ್ಕಕ್ಕಾಗಿ:
**ಮೊ: 9448126246**
**shivanandamurthyifs@gmail.com**

# ಜೇನು ಸಾಕಾಣಿಕೆ ಮತ್ತು ದೇಹಸ್ವಾಸ್ಥ್ಯ



**ಎಸ್.ಎಂ. ಶಾಂತವೀರಯ್ಯ**

**ನಿವೃತ್ತ ಸಹಾಯಕ ಕೃಷಿ ನಿರ್ದೇಶಕರು ಹಾಗೂ ಜೇನು ತಜ್ಞರು, ಮೇಟಿಕುರ್ಕೆ, ಹಿರಿಯೂರು**

ಜೇನು ಸಾಕಾಣಿಕೆಯಿಂದ ದೊರೆಯುವ ಜೇನು ಗೂಡಿನ ಉತ್ಪನ್ನಗಳಾದ ಜೇನುತುಪ್ಪ, ಜೇನುಮೇಣ, ಜೇನಂಟು, ಪರಾಗ, ರಾಜಶಾಹಿರಸ ಮತ್ತು ಜೇನು ವಿಷಗಳೆಂಬ ಅದ್ಭುತವಾದ ವಸ್ತುಗಳು ದೊರೆಯುತ್ತವೆ. ಒಂದೊಂದು ಉತ್ಪನ್ನಗಳೂ ಬಹುತೇಕ ಕಾಯಿಲೆಗಳಿಗೆ, ಅಸ್ತಮಾದಂತ ಹಿಂಸಕ ಕಾಯಿಲೆಗಳಿಗೆ, ಸಂಧಿವಾತದ ನಿತ್ಯನೋವಿಗೆ ನೈಸರ್ಗಿಕ, ಸರಳ, ಸುಲಭ, ಅಡ್ಡಪರಿಣಾಮಗಳಿಲ್ಲದ ಅತ್ಯಂತ ಪರಿಣಾಮಕಾರಿಯಾದ ಚಿಕಿತ್ಸೆ ನೀಡುವ ಮನೆಮದ್ದುಗಳಾಗಿವೆ. ಅತ್ಯಂತ ಕಡಿಮೆ ಅಥವಾ ಖರ್ಚು ಇಲ್ಲದ ಜನಸ್ನೇಹಿ ಹಾಗೂ ಪರಿಸರ ಸ್ನೇಹಿ ಚಿಕಿತ್ಸೆಯಾಗಿದೆ. ಆದುದರಿಂದ ಯಾರಿಗಾಗಿಯೂ ಅಲ್ಲ ನಮ್ಮ ವೈಯಕ್ತಿಕ ಆರೋಗ್ಯ ರಕ್ಷಣೆಯ ದೃಷ್ಟಿಯಿಂದ ಜೇನು ಸಾಕಾಣೆ ಮಾಡಲು ಮುಂದಾಗೋಣ.

**ಪ್ರತಿಯೊಂದು ಕುಟುಂಬದ ಗೃಹ ಪುಸ್ತಕ ಭಂಡಾರದಲ್ಲಿ**

1. A Complete Handbook of Nature Cure by H.K. Bhakru.
2. 'ಆರೋಗ್ಯ ದರ್ಪಣ' ಡಾ. ಮುತ್ತಿನಕಂತೆ ಶಿವಕುಮಾರ ಸ್ವಾಮಿ (ಶತಯುಷಿ)ಯವರ ವಿರಚಿತ
3. 'ನಿಮ್ಮ ಕೈಗಳಲ್ಲಿ ಆರೋಗ್ಯ' ಡಾ. ದೇವೆಂದ್ರ ವೋರಾ ವಿರಚಿತ

ಈ ಮೂರು ಗ್ರಂಥಗಳನ್ನು ಸಂಗ್ರಹಿಸಲು ಕೋರಲಾಗಿದೆ.

ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ. ಅದೇ ರೀತಿ ತಾಯಿಯೊಬ್ಬರು ಜೇನು ಸಾಕಾಣಿಕೆ ಮಾಡಿದರೆ ಉಚಿತ ಆಸ್ಪತ್ರೆಯೊಂದನ್ನು ತೆರೆದಂತೆ.

ಆಯುರ್ವೇದದಲ್ಲಿ ಜೇನನ್ನು ವರ್ಣಿಸಿದ ಪರಿ ಹೀಗಿದೆ.

1. **ಯೋಗವಾಹೀ:** (ವಾಹನ) ಜೇನಿನ ಅನುಪಾನದೊಂದಿಗೆ ಸೇವಿಸುವ ಮಾತ್ರೆ, ಚೂರ್ಣ, ದ್ರವರೂಪದ ಔಷಧಿಗಳ ಪರಿಣಾಮವನ್ನು ಹೆಚ್ಚಿಸುವುದಲ್ಲದೇ ತನ್ನ ಚಿಕಿತ್ಸಕ ಪರಿಣಾಮವನ್ನು ನೀಡುತ್ತದೆ.
2. **ಲೇಪನ:** ದೇಹದ ಯಾವುದೇ ಭಾಗಕ್ಕೆ ಪೆಟ್ಟಾಗಿ ಊತ ಉಂಟಾಗಿದ್ದರೆ ಸೋಂಕಿನಿಂದಾಗಿ ನೋವಿದ್ದರೆ, ಒಳಗಿನ ಅಂಗಾಂಶಗಳಿಗೆ ಚಿಕಿತ್ಸೆ ಬೇಕಾಗುತ್ತದೆ. ಉದಾ: ಪಯೋರಿಯಾ ಸೋಂಕಿನಿಂದಾದ ವಸಡಿನ ಊತ, ಜೇನುತುಪ್ಪದ ಚಿಕಿತ್ಸೆಯಿಂದ ತಕ್ಷಣ ಉಪಶಮನ ದೊರೆಯುತ್ತದೆ.
3. **ದೀಪಕ:** ಪಚನಕ್ರಿಯೆಯಲ್ಲಿ ವ್ಯತ್ಯಯವಾಗಿ ಅಜೀರ್ಣವಾದಾಗ, ತಿಂದ ಆಹಾರ ಜೀರ್ಣವಾಗಲು (ಅಗ್ನಿ ಕ್ರಿಯೆ) ಸಹಾಯ ಮಾಡುತ್ತದೆ.
4. **ಗ್ರಾಹೀ:** ಮಲಬದ್ಧತೆಯಾದಾಗ ಜೇನನ್ನು ಸೇವಿಸಿದರೆ ಗಟ್ಟಿಯಾದ ಮಲವನ್ನು ಸಡಿಲಿಸಿ ಸರಾಗವಾಗಿ ಮಲವಿಸರ್ಜನೆಯಾಗುತ್ತದೆ.
5. **ಚಕ್ಷುಷ್ಯ:** ಕಣ್ಣಿನ ಸಾಮಾನ್ಯ ತೊಂದರೆಗಳಿಗೆ ಉಪಶಮನ ನೀಡುತ್ತದೆ. ಕಣ್ಣಿಗೆ ಪೊರೆ ಬರುವುದನ್ನು ಮುಂದೂಡುತ್ತದೆ.

ಈ ಲೇಖನ ಸಿದ್ಧಪಡಿಸುವಾಗ (ದಿ:15–06–2025) ನನಗೊಂದು ಕರೆ ಬಂತು. ಆರ್ಟ್ ಆಫ್ ಲಿವಿಂಗ್‌ನಿಂದ ವೆಂಕಟೇಶ್ ಹೇಳುತ್ತಿದ್ದರು. ಯಾರೋ ತುಂಟರು ಜೇನುಗೂಡುಗಳಿಗೆ ಬೆಂಕಿ ಹಾಕಿದ್ದರು. ಬೆಂಕಿಯನ್ನು ನಂದಿಸಿ, ಒಂದೊಂದೇ ಗೂಡುಗಳನ್ನು ಪರಿಶೀಲಿಸಿ ಸರಿಪಡಿಸುತ್ತಿದ್ದೆ. ಕೊನೆಯ ಗೂಡಿಗೆ ಕೈಹಾಕಿದ ಕೂಡಲೇ ಆಘಾತಕ್ಕೊಳಗಾಗಿದ್ದ ಜೇನುಗಳು ಆಕ್ರಮಣ ಮಾಡಿದವು. ಅದರಲ್ಲೊಂದು ಸೀದಾ ಕಣ್ಣುಗುಡ್ಡೆಗೇ ಚುಚ್ಚಿತು. ಗಾಬರಿಯಾಗಿ ಕಣ್ಣನ್ನು ಉಜ್ಜಿದೆ. ಕಣ್ಣು ಮಸುಕು ಮಸುಕಾಯಿತು. ಕಣ್ಣು ಹೋಯಿತೆಂದುಕೊಂಡೆ, ಆಶ್ಚರ್ಯ! ಮರುದಿನ ಕಣ್ಣುಬಿಟ್ಟಾಗ ಅದು ಮತ್ತೊಂದು ಕಣ್ಣಿಗಿಂತ ಹೊಳಪಿನಿಂದ ಕೂಡಿತ್ತು. ಇದಾದ ಒಂದೆರಡು ದಿನಗಳ ನಂತರ ಅವರನ್ನು ಸಂಪರ್ಕಿಸಿದಾಗ ಅವರಿಂದ ಅದೇ ಸಂತೋಷದ ಉದ್ಗಾರ ಮೊಳಗಿತು.

**ಸ್ವರ್ಯ:** ಗಂಟಲಿಗೆ ಸಂಬಂಧಿಸಿದ ಬಹುತೇಕ ವ್ಯಾಧಿಗಳಿಗೆ ಜೇನು ಉತ್ತಮ ಮನೆಮದ್ದು. ಅಷ್ಟೇಕೆ? ಕಾಳುಮೆಣಸಿನ ಚೂರ್ಣ, ಶುಂಠಿರಸ ಮತ್ತು ಜೇನಿನ ಮಿಶ್ರಣದ ಸೇವನೆಯಿಂದ ಕೋವಿಡ್‌ನಂತಹ ವ್ಯಾಧಿಯನ್ನು ನಿಯಂತ್ರಿಸಬಹುದಾಗಿದೆ.

**ಹೃಷ್ಯ:** ಕ್ಷಯ ಅಥವಾ ಟೈಪಾಯಿಡ್‌ನಿಂದ ದೇಹದ ಅಂಗಾಂಶಗಳು ಕ್ಷಯಿಸಿರುತ್ತವೆ (ಹಿಂಡಲ್ಪಟ್ಟಿರುತ್ತವೆ). ಶಕ್ತಿಹೀನವಾಗಿರುತ್ತವೆ. ಜೇನುತುಪ್ಪ ಜೀರ್ಣವಾದ ತಕ್ಷಣ ಶಕ್ತಿ ನೀಡುವ ಆಹಾರವಾಗಿದೆ. ಈ ರೋಗಿಗಳಿಗೆ ನೀಡಿದಾಗ ಅಂಗಾಂಶಗಳಿಗೆ ಶಕ್ತಿಯನ್ನು ನೀಡಿ ಕ್ಷಯಿಸಿದ ಕಣಗಳನ್ನು ಹೊರಹಾಕುವ, ಹೊಸ ಕಣಗಳನ್ನು ಸೃಷ್ಟಿಸುವ ಕ್ರಿಯೆ ಉಂಟಾಗುತ್ತದೆ.

**ಮೇಧಾ:** ಜೇನುತುಪ್ಪಕ್ಕೆ ಮೇಧಾ ಶಕ್ತಿಯನ್ನು ಹೆಚ್ಚಿಸುವ ಗುಣವಿದೆ. ಹಾಗಾಗಿ ಇದು ಮಕ್ಕಳ ಬುದ್ಧಿಶಕ್ತಿಯನ್ನು ಹೆಚ್ಚಿಸುತ್ತದೆ. ಇಡೀ ರಾಜ್ಯದ ಮಕ್ಕಳಿಗೆ ನಿತ್ಯ 15–20 ಗ್ರಾಂ ಜೇನುತುಪ್ಪವನ್ನು ನೀಡುವುದು ಉಚಿತವೆನಿಸುತ್ತದೆ.

**ವ್ರಣಶೋಧಕ:** ಹಳೆಯ ಹೊಸಗಾಯಗಳನ್ನು ಜೇನುತುಪ್ಪದಲ್ಲಿ ತೊಳೆದಾಗ ಸೋಂಕು ನಿವಾರಣೆಯಾಗುತ್ತದೆ.

**ವ್ರಣರೋಪಕ:** ಗಾಯಗಳ ಚಿಕಿತ್ಸೆಯಲ್ಲಿ ಜೇನುತುಪ್ಪದ ಚಿಕಿತ್ಸೆ ತುಂಬಾ ಪರಿಣಾಮಕಾರಿ.

**ಜೇನು ಸಾಕಾಣಿಕೆಯಲ್ಲಿ ನನ್ನ ಕೆಲವು ಅನುಭವಗಳು:**



1. ಕೊಪ್ಪಳ ಜಿಲ್ಲೆ, ಯಲಬುರ್ಗಾ ತಾಲ್ಲೂಕು ಕಲ್ಲಿನಾಥಪುರ ಜೇನು ಸಾಕಾಣಿಕೆ ತರಬೇತಿ, ಮಧ್ಯಾಹ್ನ ಊಟದ ನಂತರ ಹಾಗೆಯೇ ಬರುತ್ತಿರುವಾಗ ಕಾಲಿಗೆ ಚುಚ್ಚಿದ ಅನುಭವವಾಯಿತು. ನೋಡಿದರೆ ಗಾಜಿನ ಚೂರು. ರಕ್ತ ಹರಿಯುತ್ತಿತ್ತು. ಎಲ್ಲ ಗಾಬರಿಯಾದರು. ಅವರಿಗೆ ಸಮಾಧಾನ ಮಾಡಿ ಪ್ರಾತ್ಯಕ್ಷಿಕೆಗೆ ಹೋದೆವು. ಅಲ್ಲಿ ದೊರೆತ ಜೇನಿನಿಂದ ಉಪಚರಿಸಿದೆ, ಒಂದು ಚಿಕ್ಕ ಕಲೆ ಮಾತ್ರ ಉಳಿದಿದೆ.

2. ಹಿರಿಯೂರು ತಾಲ್ಲೂಕು ಹೊಸಯಳನಾಡು ರಸ್ತೆಯಲ್ಲಿ ಹರಡಿದ್ದ ಬೇವಿನ ಬೀಜದ ಮೇಲೆ ಬೈಕಿನಲ್ಲಿ ಬಿದ್ದು ಮಂಡಿಗೆ ಜಜ್ಜಿ ಹೋಗಿತ್ತು. ಮನೆಗೆ ಬಂದು ಜೇನು ಚಿಕಿತ್ಸೆ ಮಾಡಿದೆ. ಚಿಕ್ಕ ಕಲೆ ಉಳಿದಿದೆ.

3. ದೀಪಾವಳಿಯಲ್ಲಿ ಪಟಾಕಿ ಹಚ್ಚುವಾಗ ಪಟಾಕಿ ಸಿಡಿದು ಕೈ ಸುಟ್ಟುಹೋದ ಅನುಭವ ಆಗಿತ್ತು. ಜೇನು ಹಚ್ಚಿದ ಕೂಡಲೆ ಎಲ್ಲ ತಣ್ಣಗಾಯಿತು.

4. ಕೈಗಾರಿಕೆ ಇಲಾಖೆ, ದಾವಣಗೆರೆಯವರು ನಡೆಸಿದ ಜೇನುಸಾಕಾಣಿಕೆ ತರಬೇತಿಯ 3 ದಿನದ ಕಾರ್ಯಕ್ರಮ. 2ನೆಯ ದಿವಸ ಬೇದಿ ಶುರುವಾಯಿತು. ನನ್ನ ಪ್ರವಾಸದ ಚೀಲದಲ್ಲಿ ಜೇನು ಬಾಟಲಿ ಇರುತ್ತದೆ. ನಿಯಮಿತವಾಗಿ ಜೇನು ಉಪಯೋಗಿಸಿ ನಿಯಂತ್ರಣ ಮಾಡಿಕೊಂಡೆ.

5. **ಬಿಕ್ಕಳಿಕೆ:** ನನ್ನ ಮೊಮ್ಮಗ ಬಿಕ್ಕಳಿಕೆಯಿಂದ ಪೀಡಿತನಾಗಿದ್ದ. ಕೇವಲ ಅಶ್ವಗಂಧಿ ಚೂರ್ಣವನ್ನು ಜೇನುತುಪ್ಪದೊಂದಿಗೆ ತಿನ್ನಲು ಹೇಳಿದೆ. ಬಿಕ್ಕಳಿಕೆ ಸಂಪೂರ್ಣವಾಗಿ ಗುಣಮುಖವಾಗಿದೆ.

6. **ಚಿಕೂನ್‌ಗುನ್ಯಾ:** ರಾಷ್ಟ್ರೀಯ ಸಮವಿಕಾಸ ಯೋಜನೆಯಲ್ಲಿ ಜೇನು ಸಾಕಾಣಿಕೆ ತರಬೇತಿ ಕಾರ್ಯಕ್ರಮ. ಹೊಸದುರ್ಗದ ಬನ್ನಿಹಳ್ಳಿಯ ತಂಡದಲ್ಲಿ ಇದ್ದಕ್ಕಿದ್ದಂತೆ ವ್ಯಕ್ತಿಯೊಬ್ಬ ಕುಸಿದು ಬಿದ್ದಾಗ, ಅದೃಷ್ಟವಶಾತ್ ಆರೋಗ್ಯ ಕಾರ್ಯಕರ್ತ ಅಲ್ಲೇ ಲಭ್ಯವಿದ್ದು ತಕ್ಷಣ ಚಿಕಿತ್ಸೆ ದೊರೆಯಿತು. ಉಳಿದವರು ಒಬ್ಬರಿಗೊಬ್ಬರು ಜೇನು ಹುಳುಗಳಿಂದ ಚುಚ್ಚಿಸಿಕೊಂಡು ಚಿಕೂನ್‌ಗುನ್ಯಾದಿಂದ ಪಾರಾದರು.

7. **ಮೂಲವ್ಯಾಧಿ:** ಮಲಬದ್ಧತೆಯ ಮುಂದಿನ ಹಂತವೇ ಮೂಲವ್ಯಾಧಿ. ನೋವಿರುವಾಗ ಆಸನಕ್ಕೆ ತಣ್ಣೀರಿನ ಚಿಕಿತ್ಸೆ ನಂತರ ಆಸನಕ್ಕೆ ಜೇನು ಲೇಪನ ಮಾಡಬೇಕು. ಮುಖ್ಯವಾಗಿ ಜೇನುತುಪ್ಪದಲ್ಲಿ ಮುಳುಗಿಸಿದ ಔದುಂಬರ ಹಣ್ಣುಗಳನ್ನು (ಅಂಜುರ, ಅತ್ತಿ, ಗೋಳಿ, ಆಲ, ಬಸರಿ ಇತ್ಯಾದಿ) ಸೇವಿಸಬೇಕು. ಇತರೆ ನಿಸರ್ಗ ಚಿಕಿತ್ಸೆಗಳಿಂದ ಸುಲಭವಾಗಿ ನಿಯಂತ್ರಿಸಬಹುದು.

8. **ಸಂಧಿವಾತ:** ಟೆನ್ನಿಸ್ ಎಲ್ಬೋ ಮೊಣಕೈ ಸಂಧಿ ನೋವಿನಿಂದ ಕಂಗಾಲಾಗಿದ್ದೆ. ಆ ಕೈ ಉಪಯೋಗವನ್ನು (ಬಲಗೈ) ಕಮ್ಮಿ ಮಾಡಿದ್ದೆ. ಚಮತ್ಕಾರ ನಡೆಯಿತು. ಅದು – 2001. ಮುಖಪರದೆ ಕೈಗವಸು ಇದ್ದಾಗಿಯು ಸಹ ವ್ಯಗ್ರವಾದ ಜೇನೊಣಗಳು ಅಕ್ರಮಣ ಮಾಡಿದವು. ಅವುಗಳಿಗೆ ಜಾಗ ಸಿಕ್ಕಿದ್ದು ಮೊಣಕೈಯಲ್ಲಿದ್ದ ಅಲ್ಪ ಜಾಗದಲ್ಲಿ ನೂರಾರು ಜೇನೊಣಗಳು ಒಮ್ಮೆಲೆ ಚುಚ್ಚಿದವು. ಎಲ್ಲಾ ಬಗೆಹರಿಯಿತು. ಈಗ 25 ಸಂವತ್ಸರಗಳು ಕಳೆದಿವೆ ನಿರಾಳವಾಗಿದ್ದೇನೆ.

9. **ಪ್ರಚೋಧನೆ ಸಮಸ್ಯೆ:** ಇದೊಂದು ಯಾರು ನಂಬಲಾರದ ಕಥೆ. ಪ್ರಚೋಧನೆ ಹೀಗಾಗುತ್ತೆ– ಮೂತ್ರಕೋಶದ ಜಾಗ ಆಕ್ರಮಿಸಿ ಕುಗ್ಗಿಸುತ್ತದೆ. ಸ್ವಲ್ಪ ಮೊತ್ರ ಸಂಗ್ರಹವಾದರೂ ವಿಸರ್ಜನೆಗೆ ಪ್ರಯೋಜನೆ ಆಗುತ್ತದೆ. ಆಹಾ ಆ ಹಿಂಸೆ ಅದೇನು ಹೇಳಲಿ. ಇಲ್ಲಿ ದಾಖಲಿಸಲಾಗುವುದಿಲ್ಲ. ನಾನೀಗ ಮುಕ್ತನಾಗಿದ್ದೇನೆ. ಎಲ್ಲರಂತೆ 2, 3, 4 ಗಂಟೆಗಳ ಕಾಲ ಮೂತ್ರ ಬಂಧ ಮಾಡಲು ಅಗುತ್ತದೆ.

10. **ಗ್ಯಾಸ್ಟ್ರಿಕ್ ಸಮಸ್ಯೆ:** ಭಯ ಬೇಡ. ಒಂದು ದಿನ ಉಪವಾಸ ಸಾಧ್ಯವಾದರೆ ಜೇನಿನೊಂದಿಗೆ ಎಳನೀರು ಸೇವನೆ ಗ್ಯಾಸ್ಟ್ರಿಕ್ ಸಮಸ್ಯೆ ನಿವಾರಿಸುತ್ತದೆ. ಇತ್ತಿಚೇಗೆ ಆಹಾರ ಕಲಬೆರಕೆಯಿಂದ ಮತ್ತು ಬಾಯಿ ರುಚಿಗೆ ತಿನ್ನುವ ಆಹಾರಗಳಿಂದ ಈ ಸಮಸ್ಯೆ ವಿಪರೀತವಾಗುತ್ತಿದೆ.

11. **ಶಕೆ ಗುಳ್ಳೆ:** ಜೇನು ಲೇಪಿಸಿ 30–40 ನಿಮಿಷಗಳ ನಂತರ ತೊಳೆಯಿರಿ.

12. **ಸೋರಿಯಾಸಿಸ್:** ಚೆನ್ನಾಗಿ ತೊಳೆದು ಜೇನು ಲೇಪಿಸಿ 40 ರಿಂದ 50 ನಿಮಿಷಗಳ ನಂತರ ತೊಳೆಯಿರಿ 2 ರಿಂದ 3 ಬಾರಿ ಮಾಡಬಹುದು.



**ಕೆಲವು ಮಿಥ್ಯೆಗಳು:**

ಆರು ತಿಂಗಳೊಳಗಿನ ಶಿಶುಗಳಿಗೆ ಜೇನು ಕೊಡಬಾರದು ಏಕೆಂದರೆ ಆ ವಯಸ್ಸಿನಲ್ಲಿ ಬೋಟುಲಿಸಮ್ ದಂಡಾಣು ನಿರೋಧಕ ಶಕ್ತಿ ಶಿಶುಗಳಿಗೆ ಇರುವುದಿಲ್ಲ. ಆದರೆ ಕೆಲಸಗಾರ್ತಿ ಜೇನುನೊಣದ ಬಾಯಿಯಿಂದ ಬಂದ ಜೇನು ಹುಟ್ಟಿನ ಕಣಗಳಲ್ಲಿ ಸಂಗ್ರಹವಾಗಿ ಮೇಣದಿಂದ ಮುಚ್ಚಲಾಗಿರುತ್ತದೆ. ಆದ್ದರಿಂದ ಇದು ತಾಯಿಯ ಹಾಲಿನಷ್ಟೇ ಪರಿಶುದ್ಧ ಹಾಗೂ ಶಕ್ತಿದಾಯಕ ಆಹಾರ ಔಷಧಿಯಾಗಿದೆ. ಜೇನು ಸಾಕಾಣಿಕೆಯ ಲಾಭ ಸಾರ್ವತ್ರಿಕ. ಅದರಲ್ಲಿ ಬಹುಮುಖ್ಯವಾಗಿ ಮೊದಲ ಪರಾಗಸ್ಪರ್ಶ, ಅಧಿಕ ಕೃಷಿ ಉತ್ಪಾದನೆ ಗೂಡಿನ ಉತ್ಪನ್ನಗಳಿಂದ ಆಹಾರ, ಆರೋಗ್ಯದ ರಕ್ಷಣೆ, ಈ ಉದ್ಯಮದಲ್ಲಿ ತೊಡಗಿದವರಿಗೆ ಸ್ವಯಂ ಉದ್ಯೋಗ, ಪರಿಸರ ಸಮತೋಲನ, ದೇಶದ ಸಮಗ್ರ ಆದಾಯ ವೃದ್ಧಿ.

ಇತ್ತೀಚೆಗೆ ಇನ್ಸ್ಟಾಗ್ರಾಮ್‌ನಲ್ಲಿ ಒಂದು ಸುದ್ದಿ ನೋಡಿದೆ. ಜೇನು ವಿಷದ ಚಿಕಿತ್ಸೆಯಿಂದ ಸ್ತನ ಕ್ಯಾನ್ಸರ್ ಸಂಪೂರ್ಣ ಗುಣವಾಗುತ್ತದೆ. ಅದೇನು ಆಶ್ಚರ್ಯವಲ್ಲ ಜೇನುಗಳ ವಿಷಯದಲ್ಲಿ ಒಂದು ಮಾತಿದೆ. One stung by Honey Bee is Blessed. ಜೇನು ಚುಚ್ಚಿಸಿಕೊಂಡವನು ಅದೃಷ್ಟಶಾಲಿ. ಹೇಳಲೇಬೇಕಾದ ಸಂಗತಿಯೆಂದರೆ ಡಾ. ಬಿ.ಜಿ.ಎಲ್. ಸ್ವಾಮಿಯವರು ವಿಶ್ವಮಾನ್ಯ ಸಸ್ಯಶಾಸ್ತ್ರಜ್ಞರು. ಅವರು ತಮ್ಮ ಹಸಿರು ಹೊನ್ನು ಪುಸ್ತಕದಲ್ಲಿ ನೀಡಿದ ಉದಾಹರಣೆ ಹೀಗಿದೆ. ಕೇರಳದ ಕಾಡಿನ ಹಾಡಿಯಲ್ಲಿ ಒಬ್ಬ ಬುಡಕಟ್ಟು ಜನಾಂಗದ 4 1/2 ಅಡಿ ಎತ್ತರದ ಧೈರ್ಯಶಾಲಿ ಹುಡುಗ ಬಾಯಲ್ಲಿ ಕತ್ತಿ ಕಚ್ಚಿಕೊಂಡು 3–4 ಜನ ತಬ್ಬುವಷ್ಟು, 50–60 ಅಡಿ ಎತ್ತರದ ಮರವನ್ನು ಕತ್ತಿಯಿಂದ ಹೆಜ್ಜೆ ಮೂಡಿಸುತ್ತಾ ಹತ್ತಿ ಸೋದೆ ಬುರುಡೆಯಲ್ಲಿ ಜೇನು ಸಂಗ್ರಹ ಮಾಡಿ ಇಳಿಯುವ ದೃಶ್ಯ ಮೈ ನವಿರೇಳಿಸುತ್ತದೆ. ಅದೆಂಥ ವಜ್ರಕಾಯ! ಎಂಥ ಆತ್ಮವಿಶ್ವಾಸ. ನನ್ನ 27 ವರ್ಷಗಳ ಅನುಭವಗಳನ್ನು ಕೆದಕಿದರೆ ಅದೊಂದು ದೊಡ್ಡ ಕಾದಂಬರಿಯೇ ಆಗುತ್ತದೆ.

ಈಗ ಹೇಳಿ, ಈಗಲಾದರೂ ಜೇನು ಸಾಕಾಣಿಕೆ ಮಾಡಲು ಮುಂದಾಗುವಿರಾ? ಜೊತೆಗೆ ಜೇನು ಚಿಕಿತ್ಸೆಯ ಆಸ್ಪತ್ರೆ ತೆರೆಯುವಿರಾ?

ಲೇಖಕರ ಸಂಪರ್ಕಕ್ಕಾಗಿ:
**ಮೊ: 9449726068**
**chandanamadhuvana@gmail.com**

# ಪ್ರಮುಖ ಪರಿಸರ ಸಂಬಂಧಿತ ದಿನಗಳು: ಅಕ್ಟೋಬರ್–ಡಿಸೆಂಬರ್ 2025


**ಅಕ್ಟೋಬರ್ 13: ಅಂತರರಾಷ್ಟ್ರೀಯ ನೈಸರ್ಗಿಕ ವಿಕೋಪ ಕಡಿತ ದಿನ**
**ಧ್ಯೇಯವಾಕ್ಯ:** ವಿಪತ್ತುಗಳಲ್ಲ, ನಿಧಿ ಸ್ಥಿತಿಸ್ಥಾಪಕತ್ವ
**ಅಕ್ಟೋಬರ್ 14: ಅಂತರರಾಷ್ಟ್ರೀಯ ಇ–ತ್ಯಾಜ್ಯ ದಿನ**
**ಧ್ಯೇಯವಾಕ್ಯ:** ನಿಮ್ಮ ಇ–ತ್ಯಾಜ್ಯವನ್ನು ಮರುಬಳಕೆ ಮಾಡಿ – ಇದು ನಿರ್ಣಾಯಕ
**ಅಕ್ಟೋಬರ್ 16: ವಿಶ್ವ ಆಹಾರ ದಿನ**
**ಧ್ಯೇಯವಾಕ್ಯ:** ಉತ್ತಮ ಆಹಾರ ಮತ್ತು ಉತ್ತಮ ಭವಿಷ್ಯಕ್ಕಾಗಿ ಕೈಜೋಡಿಸಿ
**ಡಿಸೆಂಬರ್ 5: ವಿಶ್ವ ಮಣ್ಣು ದಿನ**
**ಧ್ಯೇಯವಾಕ್ಯ:** ಆರೋಗ್ಯಕರ ನಗರಗಳಿಗೆ ಆರೋಗ್ಯಕರ ಮಣ್ಣು
**ಡಿಸೆಂಬರ್ 11: ಅಂತರರಾಷ್ಟ್ರೀಯ ಪರ್ವತ ದಿನ**
**ಧ್ಯೇಯವಾಕ್ಯ:** ಪರ್ವತಗಳು ಮತ್ತು ಅದರಾಚೆಗಿನ ಪ್ರದೇಶಗಳಲ್ಲಿ ನೀರು, ಆಹಾರ ಮತ್ತು ಜೀವನೋಪಾಯಕ್ಕೆ ಹಿಮನದಿಗಳು ಮುಖ್ಯ


## ಜಾಹೀರಾತು ವಿವರಗಳು

ಕೃಷಿವನ ವಾರ್ತಾಪತ್ರಿಕೆಯಲ್ಲಿ ಜಾಹೀರಾತು ನೀಡಲು ನಿಗದಿಪಡಿಸಿದ ದರಗಳು.

| ಕ್ರ.ಸಂ | ವಿಸ್ತೀರ್ಣ | ಕಪ್ಪು–ಬಿಳುಪು ದರ (ರೂ.ಗಳಲ್ಲಿ) | ವರ್ಣಮಯ ದರ (ರೂ.ಗಳಲ್ಲಿ) | ಅವಧಿ |
|---|---|---|---|---|
| 1 | 1/4 ಪುಟ | 2500/– | 5000/– | 1 ವರ್ಷ |
| 2 | 1/2 ಪುಟ | 5000/– | 10000/– | 1 ವರ್ಷ |
| 3 | 1 ಪುಟ | 10000/– | 20000/– | 1 ವರ್ಷ |


ಭೂಮಿಯ ವಾತಾವರಣದಲ್ಲಿನ ಗಾಳಿಯ ಸಂಯೋಜನೆಯು (Composition of Air) ಪ್ರಮುಖವಾಗಿ ಈ ಕೆಳಗಿನ ಅನಿಲಗಳನ್ನು ಹೊಂದಿದೆ: ಸಾರಜನಕ (Nitrogen-$N_2$)-78%, ಆಮ್ಲಜನಕ (Oxygen -$O_2$)-21%, ಆರ್ಗಾನ್ (Argon-Ar)-0.93%, ಇಂಗಾಲದ ಡೈಆಕ್ಸೈಡ್ (Carbon Dioxide-$CO_2$)-0.04%, ಇತರೆ ಅನಿಲಗಳು ಮತ್ತು ನೀರಿನ ಆವಿ (Other gases & Water Vapor): ನಿಯಾನ್, ಹೀಲಿಯಂ, ಮೀಥೇನ್ ಮುಂತಾದವುಗಳು ಅಲ್ಪ ಪ್ರಮಾಣದಲ್ಲಿವೆ. ಗಾಳಿಯ ಸಂಯೋಜನೆಯ ಚಾರ್ಟ್ (Kannada Description): ಅತಿ ಹೆಚ್ಚು ಪ್ರಮಾಣದಲ್ಲಿರುವ ಅನಿಲ: ಸಾರಜನಕ (78%)ಉಸಿರಾಟಕ್ಕೆ ಅಗತ್ಯವಾದ ಅನಿಲ: ಆಮ್ಲಜನಕ (21%) ಈ ಚಿತ್ರವು ವಾತಾವರಣದ ಪ್ರಮುಖ ಅನಿಲಗಳ ಶೇಕಡಾವಾರು ಪ್ರಮಾಣವನ್ನು ತೋರಿಸುತ್ತದೆ.



# ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆಯ ಅಕ್ಟೋಬರ್-ಡಿಸೆಂಬರ್ 2025 ರಲ್ಲಿ ನಡೆದ ಕಾರ್ಯಕ್ರಮಗಳು

1) ದಿ: 11-10-2025 ರಂದು ಕಾರ್ಯಕಾರಿ ಸಮಿತಿ ಸಭೆಯನ್ನು ನಡೆಸಲಾಯಿತು.

2) ದಿ: 18-10-2025 ರಂದು ಸಂಸ್ಥೆಯ 12ನೇ ವಾರ್ಷಿಕ ಸರ್ವ ಸದಸ್ಯರ ಸಭೆ, ವಿಶೇಷ ಸರ್ವ ಸದಸ್ಯರ ಸಭೆಯನ್ನು ನಡೆಸಲಾಯಿತು.

3) ದಿ: 18-10-2025 ರಂದು ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾಗಿದ್ದ ದಿವಂಗತ ಎ.ಎಸ್. ಸದಾಶಿವಯ್ಯ [ನಿವೃತ್ತ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಪಡೆ ಮುಖ್ಯಸ್ಥರು)] ಹಾಗೂ ಟಿ.ಹೆಚ್. ಮಲ್ಲಿಕಾರ್ಜುನ [ನಿವೃತ್ತ ಉಪ ಅರಣ್ಯ ಸಂರಕ್ಷಣಾಧಿಕಾರಿ] ಇವರುಗಳ ಹೆಸರಿನಲ್ಲಿ ಕೃಷಿಅರಣ್ಯ ಸಾಧಕರಿಗೆ ಈ ಕೆಳಕಂಡಂತೆ ರಾಜ್ಯ ಮಟ್ಟದ ಕೃಷಿಅರಣ್ಯ ಸಾಧಕ ಪ್ರಶಸ್ತಿ ಪ್ರಧಾನ ಮಾಡಲಾಯಿತು.

ಸಂಸ್ಥೆಯ ವತಿಯಿಂದ ಕೃಷಿಅರಣ್ಯದಲ್ಲಿ ಗಮನಾರ್ಹ ಸೇವೆ ಸಲ್ಲಿಸಿದವರಿಗೆ ಎ.ಎಸ್. ಸದಾಶಿವಯ್ಯ ಹಾಗೂ ಟಿ.ಹೆಚ್. ಮಲ್ಲಿಕಾರ್ಜುನ ಕೃಷಿಅರಣ್ಯ ಸಾಧಕ ರಾಜ್ಯ ಮಟ್ಟದ ಪ್ರಶಸ್ತಿಗಳನ್ನು ನೀಡಲಾಯಿತು. ಎ.ಎಸ್. ಸದಾಶಿವಯ್ಯ ಕೃಷಿಅರಣ್ಯ ಸಾಧಕ ರಾಜ್ಯ ಮಟ್ಟದ ಪ್ರಶಸ್ತಿ ಈ ಕೆಳಗಿನಂತೆ ಪ್ರಶಸ್ತಿಗಳಿಗೆ ಭಾಜನರಾಗಿರುತ್ತಾರೆ.

**ರೈತರು:**

1) ಶ್ರೀ ವಿ.ಎಂ. ಚಿಕ್ಕತಿಮ್ಮಾ ರೆಡ್ಡಿ, ಅದ್ದೆವಿಶ್ವನಾಥಪುರ, ಯಲಹಂಕ ತಾಲ್ಲೂಕು, ಬೆಂಗಳೂರು ಜಿಲ್ಲೆ

2) ಶ್ರೀ ಯೋಗಾನಂದ ಮೂರ್ತಿ ಟಿ.ಎನ್, ತಡಸೂರು, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ

**ಮುಂಚೂಣಿ ಅರಣ್ಯ ಸಿಬ್ಬಂದಿ:**

1) ಶ್ರೀ ಎಸ್.ಆರ್ ಅಶೋಕ ರೆಡ್ಡಿ, ಅರಣ್ಯ ವೀಕ್ಷಕ, ಅವಲಕುಪ್ಪ ಸಸ್ಯಕ್ಷೇತ್ರ, ಕೋಲಾರ ಜಿಲ್ಲೆ

2) ಶ್ರೀ ಎಸ್.ಎನ್. ಜಯಚಂದ್ರ, ಉಪವಲಯ ಅರಣ್ಯಾಧಿಕಾರಿ, ಶಿಡ್ಲಘಟ್ಟ ವಲಯ, ಚಿಕ್ಕಬಳ್ಳಾಪುರ ಜಿಲ್ಲೆ ಟಿ.ಹೆಚ್. ಮಲ್ಲಿಕಾರ್ಜುನ ಕೃಷಿಅರಣ್ಯ ಸಾಧಕ ರಾಜ್ಯ ಮಟ್ಟದ ಪ್ರಶಸ್ತಿ ಈ ಕೆಳಗಿನಂತೆ ಪ್ರಶಸ್ತಿಗಳಿಗೆ ಭಾಜನರಾಗಿರುತ್ತಾರೆ.

**ರೈತರು:**

1) ಶ್ರೀ ಮಂಜುನಾಥ್ ಎಸ್.ಡಿ, ಶಿವಪುರ, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ

**ಸಂಸ್ಥೆ:**

1) ಪುಣ್ಯಭೂಮಿ, ಯಡೂರು ಸಮೀಪ, ಹುಣಸವಳ್ಳಿ ಅಂಚೆ, ಆಲೂರು ತಾಲ್ಲೂಕು, ಹಾಸನ ಜಿಲ್ಲೆ

**ಮುಂಚೂಣಿ ಅರಣ್ಯ ಸಿಬ್ಬಂದಿ:**

1) ಶ್ರೀ ಎಮ್. ಶಿವ, ಉಪ ವಲಯ ಅರಣ್ಯಾಧಿಕಾರಿ, ಸಾಮಾಜಿಕ ಅರಣ್ಯ ವಲಯ, ಮೈಸೂರು

2) ಶ್ರೀ ಕೆ. ರವಿ, ಗಸ್ತು ಅರಣ್ಯ ಪಾಲಕ, ಸಾಮಾಜಿಕ ಅರಣ್ಯ ವಲಯ, ಮೈಸೂರು

ಸಂಸ್ಥೆಯ ವತಿಯಿಂದ ಪ್ರಶಸ್ತಿ ಪುರಸ್ಕೃತರನ್ನು ಶಾಲು, ಹಾರ, ಮೈಸೂರು ಪೇಟ ಹೊದಿಸಿ, ಪ್ರಶಸ್ತಿ ಪತ್ರ, ಹಣ್ಣಿನ ಬುಟ್ಟಿ, ನೆನಪಿನ ಕಾಣಿಕೆ (ಮೊಮೆಂಟೊ) ಹಾಗೂ ಗೌರವಧನವನ್ನು ನೀಡಿ ಗೌರವಿಸಲಾಯಿತು. ಪ್ರಶಸ್ತಿ ಪುರಸ್ಕೃತರು ತಮ್ಮ ಕೃಷಿಅರಣ್ಯ ಅನುಭವಗಳನ್ನು ಕುರಿತು ಸಮಾರಂಭದಲ್ಲಿ ಹಂಚಿಕೊಂಡಿರುತ್ತಾರೆ.

ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ಆರ್.ಎಂ. ಪಾಲಣ್ಣರವರು ಪಾಲ್ಗೊಂಡಿರುತ್ತಾರೆ. ಶ್ರೀ ಎಂ.ಕೆ. ಶಂಕರಲಿಂಗೇಗೌಡ, ಶ್ರೀ ಅಜಯ್ ಮಿಶ್ರ, ಭಾ.ಅ.ಸೇ(ನಿ), ಡಾ. ಎಸ್.ಜಿ. ಸುಶೀಲಮ್ಮ, ಅಧ್ಯಕ್ಷರು, ಸುಮಂಗಲಿ ಸೇವಾಶ್ರಮ, ಬೆಂಗಳೂರು ಇವರು ಉಪಸ್ಥಿತರಿದ್ದು ಪ್ರಶಸ್ತಿ ಪುರಸ್ಕೃತರನ್ನು ಅಭಿನಂದಿಸಿದರು. ಶ್ರೀ ಅಮರ್ ಸದಾಶಿವಯ್ಯ ಹಾಗೂ ಶ್ರೀಮತಿ ಅನಿತಾ ಸದಾಶಿವಯ್ಯ ರವರು ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಭಾಗವಹಿಸಿ ಪ್ರಶಸ್ತಿ ಪುರಸ್ಕೃತರನ್ನು ಗೌರವಿಸಿದರು. ಶ್ರೀ ಎನ್.ಡಿ. ತಿವಾರಿ, ಭಾ.ಅ.ಸೇ (ನಿ), ಅಧ್ಯಕ್ಷರು, ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ, ಬೆಂಗಳೂರುರವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ಸಂಸ್ಥೆಯ ಸದಸ್ಯರು, ಆಹ್ವಾನಿತರು, ಪ್ರಶಸ್ತಿ ಪುರಸ್ಕೃತರು ಭಾಗವಹಿಸಿ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಯಶಸ್ವಿಗೊಳಿಸಿದರು.

4) ದಿ: 18-10-2025 ರಂದು ಇದೇ ವೇಳೆ ಸಂಸ್ಥೆಯ 'ಕೃಷಿವನ' ತ್ರೈಮಾಸಿಕ ವಾರ್ತಾಪತ್ರ ಜುಲೈ-ಸೆಪ್ಟೆಂಬರ್ 2025ನ್ನು ಬಿಡುಗಡೆ ಮಾಡಲಾಯಿತು. 'ಕೃಷಿವನ' ಸಂಪಾದಕ ಮಂಡಳಿಯ ಸಂಪಾದಕರಾದ ಶ್ರೀ ಹೆಚ್.ಜಿ. ಶಿವಾನಂದಮೂರ್ತಿಯವರು ಕೃಷಿವನ ವಾರ್ತಾಪತ್ರಿಕೆಯ ವಿಷಯಗಳ ಕುರಿತು ಮಾಹಿತಿ ನೀಡಿದರು.

5) ದಿ: 30-10-2025 ರಂದು ಕೃಷಿ ತಂತ್ರಜ್ಞರ ಸಂಸ್ಥೆ, ಬೆಂಗಳೂರು ಇವರ ವತಿಯಿಂದ ಆಯೋಜಿಸಲಾದ ವಿಶ್ವ ಆಹಾರ ದಿನ 2025 ಒಂದು ದಿನದ ಕಾರ್ಯಾಗಾರದಲ್ಲಿ ಸಂಸ್ಥೆಯು ಸಹ ಭಾಗವಹಿಸಲಾಯಿತು. ಈ ಕಾರ್ಯಕ್ರಮದಲ್ಲಿ ಹಲವಾರು ತಾಂತ್ರಿಕ ಅಧಿವೇಶನಗಳನ್ನು ನಡೆಸಲಾಯಿತು. ಈ ಕಾರ್ಯಕ್ರಮದಲ್ಲಿ ಸಂಸ್ಥೆಯ ಸದಸ್ಯರಾದ ಶ್ರೀ ಎಸ್.ಎಂ. ಶಾಂತವೀರಯ್ಯನವರನ್ನು ಜೀವಮಾನ ಸಾಧನೆಗಾಗಿ ಕೃಷಿ ತಂತ್ರಜ್ಞರ ಸಂಸ್ಥೆಯ ವತಿಯಿಂದ ಸನ್ಮಾನಿಸಲಾಯಿತು.

– ಕಾರ್ಯದರ್ಶಿಗಳು

## ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ (ನೋಂ.) – ಆಡಳಿತ ಮಂಡಳಿ

| ಕ್ರ.ಸಂ. | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| 1 | ಎನ್.ಡಿ. ತಿವಾರಿ | ಅಧ್ಯಕ್ಷರು | 94483 60161 |
| 2 | ಡಾ. ಎಸ್.ಸಿ.ವಿ. ರೆಡ್ಡಿ | ಸಹ ಅಧ್ಯಕ್ಷರು | 98806 46274 |
| 3 | ಡಾ. ಎಸ್. ರಾಜೇಂದ್ರ ಪ್ರಸಾದ್ | ಉಪಾಧ್ಯಕ್ಷರು | 94528 83308 |
| 4 | ಡಾ. ಎಸ್. ರಮೇಶ್ | ಕಾರ್ಯದರ್ಶಿ | 94480 76969 |
| 5 | ಶಿವರಾಜು ಎನ್ | ಜಂಟಿ ಕಾರ್ಯದರ್ಶಿ | 94826 47448 |
| 6 | ಎ. ಅಶ್ವಥಯ್ಯ | ಖಜಾಂಚಿ | 94481 85009 |
| 7 | ಡಾ. ಎ.ಬಿ. ಪಾಟೀಲ | ಸದಸ್ಯರು | 97401 82990 |
| 8 | ಡಾ. ಜಿ.ಕೆ. ವಸಂತಕುಮಾರ್ | ಸದಸ್ಯರು | 98440 85405 |
| 9 | ಡಾ. ಅನಿತಾ ಸದಾಶಿವಯ್ಯ | ಸದಸ್ಯರು | 96201 01012 |
| 10 | ಎ.ಸಿ. ಕೇಶವಮೂರ್ತಿ | ಸದಸ್ಯರು | 99450 86622 |
| 11 | ಸಿದ್ದೇಗೌಡ | ಸದಸ್ಯರು | 94492 44323 |
| 12 | ಮೋಹನ್ ಹೆಚ್.ಪಿ. | ಸದಸ್ಯರು | 98455 17710 |
| 13 | ಶ್ರೀನಿವಾಸ ಪಟೇಲ್ | ಸದಸ್ಯರು | 98454 70007 |
| 14 | ಡಾ. ಎಂ. ಮಹದೇವ ಮೂರ್ತಿ | ನಾಮ ನಿರ್ದೇಶನ ಸದಸ್ಯರು | 98455 88203 |
| 15 | ಆರ್. ಆಂಜನೇಯ ರೆಡ್ಡಿ | ನಾಮ ನಿರ್ದೇಶನ ಸದಸ್ಯರು | 93438 70009 |
| 16 | ಪ್ರತಾಪ್ ಹೆಗಡೆ | ಸಹ ಸದಸ್ಯರು | 98860 27377 |
| 17 | ಡಾ. ಟಿ.ಆರ್. ಗುರುಪ್ರಸಾದ್ | ಸಹ ಸದಸ್ಯರು | 94800 85966 |
| 18 | ಡಾ. ಚಂದ್ರಶೇಖರ್ ಬಿರಾದಾರ್ | ಸಹ ಸದಸ್ಯರು | 73191 32666 |
| 19 | ಜಿ.ಯು. ಶಂಕರ್ | ಸಹ ಸದಸ್ಯರು | 94482 44149 |






'ಕೃಷಿವನ' ಜುಲೈ–ಸೆಪ್ಟೆಂಬರ್ 2025ರ ಬಿಡುಗಡೆ.



ಕೃಷಿ ತಂತ್ರಜ್ಞರ ಸಂಸ್ಥೆ, ಬೆಂಗಳೂರು ಇಲ್ಲಿ ನಡೆದ ವಿಶ್ವ ಆಹಾರ ದಿನ ಕಾರ್ಯಕ್ರಮದಲ್ಲಿ ಎಸ್. ಎಂ. ಶಾಂತವೀರಯ್ಯ, ಜೇನು ತಜ್ಞರು ಇವರನ್ನು ಜೀವಮಾನ ಸಾಧನೆಗಾಗಿ ಗೌರವಿಸಲಾಯಿತು.



ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರದ ವತಿಯಿಂದ 2025 ರ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನು ಸಂಸ್ಥೆಯ ಸದಸ್ಯರಾದ ಡಾ. ಹಿತ್ತಲಮನಿ ಮತ್ತು ಡಾ. ಎಂ.ಸಿ. ರಂಗಸ್ವಾಮಿ ಇವರಿಗೆ ಕೃಷಿ ಕ್ಷೇತ್ರದಲ್ಲಿನ ಶ್ರೀಯುತರ ಸೇವೆಯನ್ನು ಪರಿಗಣಿಸಿ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಗಿರುತ್ತದೆ. ಸಂಸ್ಥೆಯ ವತಿಯಿಂದ ಶ್ರೀಯುತರುಗಳಿಗೆ ಅಭಿನಂದನೆಗಳು.



# ರೈತರು ಶ್ರೀಗಂಧದ ಮರಗಳನ್ನು

## ಕರ್ನಾಟಕ ಸೋಪ್ಸ್ & ಡಿಟರ್ಜೆಂಟ್ಸ್ ಲಿಮಿಟೆಡ್‌ಗೆ

# ಸಂಸ್ಥೆಯು ನಿಗದಿಪಡಿಸಿದ ದರದಲ್ಲಿ

# ಸರಬರಾಜು / ಮಾರಾಟ ಮಾಡುವುದು





ಕರ್ನಾಟಕ ಸೋಪ್ಸ್ & ಡಿಟರ್ಜೆಂಟ್ಸ್ ಲಿಮಿಟೆಡ್ ಸಂಸ್ಥೆಯು ಕರ್ನಾಟಕ ಸರ್ಕಾರದ ಉದ್ಯಮವಾಗಿದ್ದು, ಸದರಿ ಕಾರ್ಖಾನೆಯು ವಿಶ್ವವಿಖ್ಯಾತ ಮೈಸೂರು ಸ್ಯಾಂಡಲ್ ಸೋಪ್ ಸೇರಿದಂತೆ **ಸುಮಾರು 38 ಉತ್ಪನ್ನಗಳನ್ನು ಉತ್ಪಾದಿಸುತ್ತಿದ್ದು, ಕಂಪನಿಗೆ ಮಾಸಿಕ ಸರಾಸರಿ 600 ಕೆಜಿ ಶ್ರೀಗಂಧದೆಣ್ಣೆ ಹಾಗೂ** ವರ್ಷಕ್ಕೆ **ಸುಮಾರು 150 ಮೆಟ್ರಿಕ್ ಟನ್‌ಗಳಷ್ಟು ಶ್ರೀಗಂಧದ ಚೇಗು ಮತ್ತು ಬೇರು [Heart-wood & roots] ಅವಶ್ಯಕತೆಯಿರುತ್ತದೆ.** ದೇಶದಾದ್ಯಂತ ಶ್ರೀಗಂಧ ಬೆಳೆಯುವ ಬೆಳೆಗಾರರು ತಮ್ಮ ಜಮೀನು ಅಥವಾ ನಿವೇಶನದಲ್ಲಿ **ಸರಾಸರಿ 20 ವರ್ಷ ಮೇಲ್ಪಟ್ಟ ಶ್ರೀಗಂಧದ ಮರಗಳಿದ್ದಲ್ಲಿ** ಪ್ರಸಕ್ತ ಕರ್ನಾಟಕ ಸರ್ಕಾರದ ಅರಣ್ಯ ಇಲಾಖೆ / ಕರ್ನಾಟಕ ಸೋಪ್ಸ್ & ಡಿಟರ್ಜೆಂಟ್ಸ್ ಲಿಮಿಟೆಡ್ ದರದಲ್ಲಿ ಮಾರಾಟ ಮಾಡಲು ಇಚ್ಛಿಸಿದ್ದಲ್ಲಿ **ಕಾರ್ಖಾನೆಯೊಡನೆ ಒಡಂಬಡಿಕೆ** ಮಾಡಿಕೊಂಡು, ಕರ್ನಾಟಕ ಸೋಪ್ಸ್ & ಡಿಟರ್ಜೆಂಟ್ಸ್ ಲಿಮಿಟೆಡ್ ಸಂಸ್ಥೆಗೆ ಮಾರಾಟ ಮಾಡಲು ಕೋರಲಾಗಿದೆ.

ಸಹಿ/- ಸಹಾಯಕ ವ್ಯವಸ್ಥಾಪಕರು

ಸಂಶೋಧನೆ ಮತ್ತು ಅಭಿವೃದ್ಧಿ / ಶ್ರೀಗಂಧ ವಿಭಾಗ




**ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ**

**080-22164827, 9945405396**